# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026






ಸಂಪುಟ:02 • ಸಂಚಿಕೆ: 257 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 18.04.2025 • ಶುಕ್ರವಾರ • ಪುಟ:04 • ಬೆಲೆ:2

Volume:02 • Issue: 257 • PRGI No:KARKAN/2023/88055 • VIJAYANAGARA • 18.04.2025 • Friday • Page:04 • Rs:2


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

# ಪ್ರತ್ಯೇಕ ಹಾಲು ಒಕ್ಕೂಟಕ್ಕೆ ರೈತರು ಆಗ್ರಹ

### ವಿಜಯನಗರದಲ್ಲಿ ಹಾಲು ಒಕ್ಕೂಟ ರಚಿಸಿ | ಅಖಿಲ ಕರ್ನಾಟಕ ರಾಜ್ಯ ಕಿಸಾನ್ ಜಾಗೃತಿ ಸಂಘ ಒತ್ತಾಯ

### ಹಾಲು ಉತ್ಪನ್ನ: ವಿಜಯನಗರದಲ್ಲಿ ಶೇ.52, ಕೊಪ್ಪಳ–ಶೇ.30, ರಾಯಚೂರು–ಶೇ.14, ಬಳ್ಳಾರಿ–ಶೇ.4

■ **ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯದ ಗಡಿ ಜಿಲ್ಲೆ ಬಳ್ಳಾರಿಗೆ ರಾಯಚೂರು, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಯ ಗಡಿ ಗ್ರಾಮಗಳಿಂದ ಸುಮಾರು 200ಕ್ಕೂ ಅಧಿಕ ಕಿ.ಮೀ ದೂರವಿದ್ದು ಹಾಲು ಉತ್ಪಾದಕರು ಆರ್ಥಿಕ ನಷ್ಟದ ಜೊತೆ, ನಾನಾ ತೊಂದರೆಗಳನ್ನು ಅನುಭವಿಸುವಂತಾಗಿದೆ. ವಿಜಯನಗರ ಜಿಲ್ಲೆಯಲ್ಲಿ ಶೇ.52 ರಷ್ಟು ಹಾಲು ಉತ್ಪಾದಕರಿದ್ದು, ವಿಜಯನಗರ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟ ರಚನೆ ಮಾಡಬೇಕೆಂದು ಒತ್ತಾಯಿಸಿ ಅಖಿಲ ಕರ್ನಾಟಕ ರಾಜ್ಯ ಕಿಸಾನ್ ಜಾಗೃತಿ ಸಂಘ ಗುರುವಾರ ಬೃಹತ್ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಸಿಎಂಗೆ ಮನವಿ ಸಲ್ಲಿಸಿತು.

ಅಖಿಲ ಕರ್ನಾಟಕ ರಾಜ್ಯ ಕಿಸಾನ್ ಜಾಗೃತಿ ಸಂಘದ ರಾಜ್ಯಾಧ್ಯಕ್ಷ ಎಂ.ಪ್ರಕಾಶ ತಿಮ್ಮಲಾಪುರ ಮಾತನಾಡಿ, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟವು 4 ಜಿಲ್ಲಾಗಳನ್ನು ಒಳಗೊಂಡಿದೆ. ಒಕ್ಕೂಟದ ಕೇಂದ್ರ ಸ್ಥಾನವು ಬಳ್ಳಾರಿಯಲಿರುವುದರಿಂದ ದೂರದ ರೈತರಿಗೆ ತೀವ್ರ ತೊಂದರೆಯಾಗುತ್ತಿದೆ. ನಾಲ್ಕು ಜಿಲ್ಲೆಗಳ ಪೈಕಿ ವಿಜಯನಗರದಲ್ಲಿ 360 ಸಂಘಗಳಿದ್ದು, ಸರಾಸರಿ




1,20,000 (ಶೇ.52) ಲೀ.ಹಾಲು ಶೇಖರಣೆಯಾಗುತ್ತಿದೆ. ಕೊಪ್ಪಳ ಜಿಲ್ಲೆಯಲ್ಲಿ 270 ಸಂಘಗಳು, 70,000 ಲೀ.ಹಾಲು ಶೇಖರಣೆ, ರಾಯಚೂರು ಜಿಲ್ಲೆಯಲ್ಲಿ 129 ಸಂಘಗಳಿದ್ದು, 30000 ಹಾಲು ಶೇಖರಣೆ ಮತ್ತು ಬಳ್ಳಾರಿಯಲ್ಲಿ 69 ಸಂಘಗಳಿದ್ದು, ದಿನಕ್ಕೆ ಸರಾಸರಿ 9000 ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಅಂಕಿ ಅಂಶಗಳ ಪ್ರಕಾರ ವಿಜಯನಗರ ಜಿಲ್ಲೆಯಲ್ಲಿ ಅತ್ಯಧಿಕ ಹಾಲು ಉತ್ಪಾದಕರಿದ್ದು, ರೈತರಿಗೆ ಸಕಾಲಕ್ಕೆ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡಲು ಜಿಲ್ಲೆಯಲ್ಲಿ ಪ್ರತ್ಯೇಕ ಮೆಘಾಡೈರಿ ಆರಂಭಿಸಬೇಕು.

40 ವರ್ಷಗಳ ಆಡಳಿತದಲ್ಲಿ ಇತ್ತೀಚಿನ 5 ವರ್ಷಗಳಿಂದ ಎಲ್.ಪಿ.ಬಿ.ಭೀಮಾನಾಯ್ಕ ಅಧ್ಯಕ್ಷತೆಯಲ್ಲಿ ಹಾಲು ಒಕ್ಕೂಟದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳಾಗಿವೆ. ಅದನ್ನು ಸಹಿಸದ ಬಳ್ಳಾರಿಯ ಕೆಲ ಜನಪ್ರತಿನಿಧಿಗಳು ಅಧಿಕಾರಕ್ಕಾಗಿ ಕಿತ್ತಾಟ ಮಾಡುತ್ತಿದ್ದಾರೆಯೇ ಹೊರತು ರೈತರ ಅಭಿವೃದ್ಧಿ ಗಾಗಿ ಅಲ್ಲ. ವಿಜಯನಗರ ಜಿಲ್ಲೆಯಲ್ಲಿ ಪ್ರತ್ಯೇಕ ಡೈರಿ ಆರಂಭಿಸುವುದರಿಂದ ಹಾಲು ಉತ್ಪಾದಕ ಸಹಕಾರ ಸಂಘಗಳು ಆರ್ಥಿಕವಾಗಿ ಸದೃಢವಾಗಲಿವೆ. ಬಳ್ಳಾರಿಯ ಒಕ್ಕೂಟವು ನಷ್ಟದಿಂದ ಹೊರಬರಲಿದೆ. ಸಿಎಂ ಸಿದ್ದರಾಮಯ್ಯನವರು ರೈತರ ನ್ಯಾಯಯುತ ಧ್ವನಿಗೆ ನ್ಯಾಯ ಒದಗಿಸಿಕೊಡಬೇಕೆಂದು ಆಗ್ರಹಿಸಿದರು.

ನಗರದ ಬಸವೇಶ್ವರ ವೃತ್ತದಲ್ಲಿ ಹಾಲು ಉತ್ಪಾದಕರು, ಸಂಘಟನೆಯ ಕಾರ್ಯಕರ್ತರು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರತಿಭಟನೆ ನಡೆಸಿದರು. ಜಿಲ್ಲಾಧಿಕಾರ್ಯಾಲಯದ ಎದುರು ಜಮಾಯಿಸಿ ಬೇಡಿಕೆ ಈಡೇರಿಸುವಂತೆ ಹಾಲು ಉತ್ಪಾದಕರು ಒತ್ತಾಯಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರಿಗೆ ಮನವಿ ಸಲ್ಲಿಸಿದರು.


ಸಂಘದ ರಾಜ್ಯ ಉಪಾಧ್ಯಕ್ಷ ಎಸ್.ಎ.ಖಾದ್ರಿ, ಸಂಘದ ಪದಾಧಿಕಾರಿಗಳಾದ ಬಸವರಾಜಪ್ಪ, ಉಷಾ, ವೆಂಕಟೇಶ ದಾಸರ್, ವಿಜಯನಗರ ಜಿಲ್ಲಾಧ್ಯಕ್ಷರಾದ ಎಂ.ರತ್ನಮ್ಮ ಸುರೇಶ, ಬಳ್ಳಾರಿಯ ಪದ್ಮಾವತಿ, ಗಂಗಾಧರ ಸೇರಿದಂತೆ ಇತರರು ಇದ್ದರು.

## ಮೈಕ್ರೋ ನ್ಯೂಸ್

## ಸಿಇಟಿ ಪರೀಕ್ಷೆ ಮುಕ್ತಾಯ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಗುರುವಾರ ನಡೆಸಿದ ಗಣಿತ ಹಾಗೂ ಜೀವಶಾಸ್ತ್ರ ವಿಷಯಗಳ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಸುಗಮವಾಗಿ ಜರುಗಿದ್ದು, ಯಾವುದೇ ಗೊಂದಲವಿಲ್ಲದೇ ಮುಕ್ತಾಯವಾಗಿದೆ.



ಗಣಿತ ಪರೀಕ್ಷೆಗೆ ನೋಂದಣಿಯಾದ 4045 ವಿದ್ಯಾರ್ಥಿಗಳ ಪೈಕಿ 3867 ವಿದ್ಯಾರ್ಥಿಗಳು ಹಾಜರಾಗಿ, 178 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಜೀವಶಾಸ್ತ್ರ ಪರೀಕ್ಷೆಗೆ ನೋಂದಣಿಯಾದ 3351 ವಿದ್ಯಾರ್ಥಿಗಳ ಪೈಕಿ 3151 ವಿದ್ಯಾರ್ಥಿಗಳು ಹಾಜರಾಗಿ, 200 ವಿದ್ಯಾರ್ಥಿಗಳು ಗೈರಾಗಿದ್ದಾರೆ. ವಿದ್ಯಾರ್ಥಿಗಳು ಬೆಳಿಗ್ಗೆ 10.30 ರಿಂದ 11.50 ರವರೆಗೆ ಗಣಿತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50 ರವರೆಗೆ ಜೀವಶಾಸ್ತ್ರ ವಿಷಯದ ಪರೀಕ್ಷೆ ಬರೆದರು. ವಿಜಯನಗರ ಜಿಲ್ಲೆಯ ಗಣಿತ 10, ಜೀವಶಾಸ್ತ್ರ 8 ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ಯಾವುದೇ ಗೊಂದಲವಿಲ್ಲದೆ ಸುಗಮವಾಗಿ ನಡೆಯಿತು ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕರು ತಿಳಿಸಿದ್ದಾರೆ.

## ಏ.19 ರಂದು ಕೂಡ್ಲಿಗಿ ಶಾಸಕರಿಂದ ಜನತಾ ದರ್ಶನ



■ **ಹಂಪಿ ಟೈಮ್ಸ್ ಹೊಸಪೇಟೆ**

ಕೂಡ್ಲಿಗಿ ತಾಲೂಕಿನ ಹೊಸಹಳ್ಳಿ ಹೋಬಳಿಯಲ್ಲಿ ಏ.19 ರಂದು ತಾಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಜನತಾ ದರ್ಶನ ಕಾರ್ಯಕ್ರಮಕ್ಕೆ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ನಿರ್ದೇಶಿಸಿದ್ದಾರೆ.

## ಏ.19 ರಂದು ಜೆಸ್ಕಾಂ ಗ್ರಾಮೀಣ ಗ್ರಾಹಕರ ಸಂವಾದ ಸಭೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಗ್ರಾಮೀಣ ಜೆಸ್ಕಾಂ ಉಪವಿಭಾಗ ಕಚೇರಿಯಲ್ಲಿ ಏ.19 ರಂದು ಮಧ್ಯಾಹ್ನ 12 ಗಂಟೆಗೆ ಗ್ರಾಮೀಣ ಗ್ರಾಹಕರ ಸಂವಾದ ಸಭೆಯನ್ನು ಹಮ್ಮಿಕೊಂಡಿದ್ದು, ಹೊಸಪೇಟೆ (ನಗರ ಹೊರತುಪಡಿಸಿ) ತಾಲೂಕಿನ ವಿದ್ಯುತ್ ಗ್ರಾಹಕರು ಸಂವಾದ ಸಭೆಯಲ್ಲಿ ವಿದ್ಯುತ್ ಸಮಸ್ಯೆಗಳಿದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು ಎಂದು ಗ್ರಾಮೀಣ ಕಾರ್ಯ ಮತ್ತು ಪಾಲನೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

# ಶ್ರೀ ಮರುಳಸಿದ್ದೇಶ್ವರ ಸ್ವಾಮಿ ತೇರುಗಾಲಿ ಹೊರಗೆ

### ಮೇ–2ಕ್ಕೆ ಉಜ್ಜಯಿನಿ ಮರುಳಸಿದ್ದೇಶ್ವರ ರಥೋತ್ಸವ | ಮೇ–3 ಕ್ಕೆ ಶಿಖರ ತೈಲಾಭಿಷೇಕ



■ **ಹಂಪಿ ಟೈಮ್ಸ್ ಕೊಟ್ಟೂರು**

ಮೇ 2ರಂದು ನಡೆಯಲಿರುವ ಉಜ್ಜಯಿನಿ ಜಗದ್ಗುರು ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ಗುರುವಾರ ತೇರುಗಾಲಿಯನ್ನು ಭಕ್ತರು ತೇರುಮನೆಯಿಂಂದ ಹೊರ ಹಾಕಿದರು.

ಬೆಳಿಗ್ಗೆ 10.30 ಕ್ಕೆ ಸಕಲ ವಾದ್ಯ ಮೇಳಗಳು ಭಕ್ತರ ಜಯ ಘೋಷದೊಂದಿಗೆ ರಥದ ಗಡ್ಡೆಯನ್ನು ತೇರು ಮನೆಯಿಂದ ಎಳೆದೊಯ್ದು ರಥ ಕಟ್ಟುವ ಸ್ಥಳದಲ್ಲಿ ನಿಲ್ಲಿಸಲಾಯಿತು.

ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶೀಕೇಂದ್ರ ಮಹಾಸನ್ನಿಧಿಯವರ ಅಪ್ಪಣೆ ಹಾಗೂ ಕೃಪಾಶೀರ್ವಾದದಿಂದ ಹಾಗೂ ಶ್ರೀ ಷ.ಬ್ರ.ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳು ಮಾನಿಹಳ್ಳಿ ಪುರವರ್ಗಮಠ ಮಾನಿಹಳ್ಳಿ ಇವರ ಉಪಸ್ಥಿತಿಯಲ್ಲಿ ನೆರವೇರಿಸಲಾಯಿತು.

ಶ್ರೀ ಮಠದ ಅರ್ಚಕರು ಸಿದ್ದಲಿಂಗಯ್ಯನವರು, ವ್ಯವಸ್ಥಾಪಕರಾದ ವಿರೇಶ ಬಿ, ಗ್ರಾಮದ ಸಮಸ್ತ ಭಕ್ತರು ಹಾಗೂ 9 ಪಾದಗಟ್ಟೆಗಳ ಭಕ್ತಾಧಿಗಳು ಸುತ್ತಮುತ್ತಲಿನ ಹಳ್ಳಿಯ ಭಕ್ತರಿದ್ದರು.ಮೇ 02 ರಂದು ಶ್ರೀ ಜಗದ್ಗುರು ಶ್ರೀ ಮರುಳ ಸಿದ್ದೇಶ್ವರ ಸ್ವಾಮಿಯ ರಥೋತ್ಸವವು ನಡೆಯಲಿದ್ದು, ಮೇ 3ರಂದು ಶಿಖರಕ್ಕೆ ತೈಲಾಭಿಷೇಕ ನೆರವೇರಲಿದೆ. ಮೇ 07 ರಂದು ಉಚಿತ ಸಾಮೂಹಿಕ ವಿವಾಹ ನಡೆಯಲಿವೆ ಎಂದು ಮಠದ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಪ್ರತಿ ಗಂಟೆಗೆ ಮೂರು ಬಾರಿ ನೀರು ಕುಡಿಯಿರಿ

### ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಸಲಹೆ | ಬಿಸಿಲಿನ ನಿರ್ಲಕ್ಷ್ಯ ಬೇಡ

### ನರೇಗಾ ಕೂಲಿ ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲೆ ಉಚಿತ ಆರೋಗ್ಯ ತಪಾಸಣೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಬೇಸಿಗೆಯ ಬಿಸಿಲು, ಬಿಸಿಗಾಳಿ ತಾಪದಿಂದ ಕಾರ್ಮಿಕರು ಹೊರಬಲು ಪ್ರತಿ 20 ನಿಮಿಷಕ್ಕೊಮ್ಮೆ ನೀರು ಕುಡಿಯುವುದುಉ ಸೇರಿದಂತೆ ಅಗತ್ಯ ಮುಂಜಾಗ್ರತ ಕ್ರಮಗಳನ್ನು ಪಾಲಿಸಬೇಕು ಎಂದು ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ.ಎಂ.ಪಿ.ದೊಡಮನಿ ಹೇಳಿದರು.

ತಾಲೂಕಿನ ವ್ಯಾಸನಕೆರೆಯಲ್ಲಿ ಹೂಳು ತೆಗೆಯುವ ನರೇಗಾ ಕೂಲಿಕಾರ್ಮಿಕರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಗುರುವಾರ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದರು. ಬೇಸಿಗೆಯಲ್ಲಿ ನಿರ್ಜಲೀಕರಣವಾಗದಂತೆ ಶುದ್ಧ ಕುಡಿಯುವ ನೀರನ್ನು ಕುಡಿಯುವುದು ಅವಶ್ಯ. ಓಆರ್‌ಎಸ್ ಬಳಸಿ ನೀರು ಅಥವಾ ಮಾತ್ರೆಗಳನ್ನು ಸೇವಿಸಿದರೆ ಒಳ್ಳೆಯದು. ತಲೆ ನೋವು, ಮೈಕೈ ನೋವು ಕಂಡು ಬಂದರೆ ನಿರ್ಲಕ್ಷಿಸದೇ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ವೈದ್ಯಾಧಿಕಾರಿಗಳ ಬಳಿ ಚಿಕಿತ್ಸೆ ಪಡೆಯಬೇಕು. ಕಾರ್ಮಿಕರು ಬೆ.11 ರಿಂದ ಸಂಜೆ.4 ರವರೆಗೆ ನೇರ ಸೂರ್ಯನ ಬಿಸಿಲಿನಲ್ಲಿ ಕೆಲಸ ನಿರ್ವಹಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕೆಲಸ ಮಾಡುವ ಸ್ಥಳದಲ್ಲಿ ಕಾರ್ಮಿಕರು ಆಯಾಸಗೊಂಡರೆ ವಿಶ್ರಾಂತಿ ಪಡೆಯಲು ನೆರಳಿನ ವ್ಯವಸ್ಥೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕು. ಹತ್ತಿಯ ಮತ್ತು ಶ್ವೇತ ವರ್ಣದ ತುಂಬು ತೋಳಿನ ಅಂಗಿ, ಬಟ್ಟೆ ಮತ್ತು ಟೋಪಿಯನ್ನು ಧರಿಸುವುದು ಉತ್ತಮ. ಆರೋಗ್ಯದ ಕಡೆಗೆ ಹೆಚ್ಚು ಕಾಳಜಿ ವಹಿಸಬೇಕು ಎಂದರು.

ಕಾರ್ಮಿಕರಿಗೆ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆದು ಎಲ್ಲರಿಗೂ ಮಧುಮೇಹ, ರಕ್ತದೊತ್ತಡ ಪರೀಕ್ಷೆ ನಡೆಸಲಾಯಿತು. ತಾಲೂಕಿನ ಮಲಪನಗುಡಿ, ಸೀತಾರಾಮ್‌ತಾಂಡ, ಕಲ್ಲಹಳ್ಳಿ, ನಾಗೇನಹಳ್ಳಿ, ಹೊಸೂರು ಗ್ರಾಪಂನ ಸುಮಾರು 2500 ಕ್ಕೂ ಹೆಚ್ಚು ನರೇಗಾ ಕೂಲಿ ಕಾರ್ಮಿಕರು ಚಿಕಿತ್ಸೆ ಪಡೆದಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಈ ವೇಳೆ ಮರಿಯಮ್ಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ರಾಧಾಕೃಷ್ಣ, ಜಿಲ್ಲಾ ಅರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಧನಲಕ್ಷ್ಮೀ, ನಾರಾಯಣ ಸಮುದಾಯ ಆರೋಗ್ಯ ಅಧಿಕಾರಿ ಭರತ, ರೇಣುಕಾ, ಜಿಪಂನ ಐಇಸಿ ಸಂಯೋಜಕ ನಾಗರಾಜ ಇತರರು ಇದ್ದರು.




ಹಂಪಿ ಟೈಮ್ಸ್ HAMPI TIMES

## ಬೆಳಕಿನ ಹಾದಿ

# ಚಿಂತೆಯ ಬದಲು ಚಿಂತನೆ ಇರಲಿ ಅಂಕವಷ್ಟೇ ಅಂತಿಮವಲ್ಲ

■ ಶೇಖರಯ್ಯ ಟಿ. ಎಚ್. ಎಂ,.ಗೆದ್ದಲಗಟ್ಟೆ.



ಮೊನ್ನೆ ತಾನೆ ದ್ವಿತೀಯ ಪಿಯುಸಿ ಫಲಿತಾಂಶ ಬಂದಿದೆ. ಒಂದೆರಡು ವಾರಗಳಲ್ಲಿ ಹತ್ತನೇ ತರಗತಿಯ ಫಲಿತಾಂಶವು ಬರಲಿದೆ. ಪಾಲಕ–ಪೋಷಕರ, ಶಿಕ್ಷಕರ, ಶಿಕ್ಷಣ ಸಂಸ್ಥೆಗಳ ನಿರಂತರ ಸಹಕಾರ ಮತ್ತು ಮಾರ್ಗದರ್ಶನದಿಂದ ಸಾಕಷ್ಟು ವಿದ್ಯಾರ್ಥಿಗಳು ಉತ್ತಮ ಫಲಿತಾಂಶವನ್ನು ಪಡೆದು ಶಾಲೆಗೆ, ತಂದೆ–ತಾಯಿಗಳಿಗೆ, ಊರಿಗೆ ಕೀರ್ತಿಯನ್ನು ತಂದಿದ್ದಾರೆ, ತರಲಿದ್ದಾರೆ.ಅವರೆಲ್ಲರಿಗೂ ಅಭಿನಂದನೆಗಳು. ಆತ್ಮೀಯ ವಿದ್ಯಾರ್ಥಿಗಳೇ ಫಲಿತಾಂಶ ಇಷ್ಟೇ ಬರಬೇಕಿತ್ತೆಂದು ನಿರೀಕ್ಷೆ ಇಟ್ಟುಕೊಳ್ಳುವುದು ತಪ್ಪಲ್ಲ. ಹಾಗಂತ ಕಡಿಮೆ ಅಂಕಗಳು ಬಂದವು ಎಂದು ಅದರ ಬಗ್ಗೆಯೇ ಕೊರಗುತ್ತಾ ಕೂರುವುದು ತಪ್ಪು. ಇದು ಒತ್ತಟ್ಟಿಗಿರಲಿ. ಇನ್ನೂ ಹಲವಾರು ಕಾರಣಗಳಿಂದ ಪರೀಕ್ಷೆಯಲ್ಲಿ ಅನುತ್ತೀರ್ಣರಾದವರು ದುಡುಕಿ ಅನಾಹುತಗಳನ್ನು ಮಾಡಿಕೊಳ್ಳುತ್ತಿರುವುದು ಆತಂಕದ ವಿಚಾರವಾಗಿದೆ. ವಿದ್ಯಾರ್ಥಿಗಳೇ ನಿಮಗೆ ಸ್ಪಷ್ಟವಾಗಿ ನೆನಪಿರಲಿ ಪರೀಕ್ಷೆಯಲ್ಲಿ ಬರುವ ಅಂಕಗಳಷ್ಟೇ ಅಂತಿಮವಲ್ಲ. ಹಾಗಂತ ಪರೀಕ್ಷೆಯಲ್ಲಿ ಫೇಲಾದರೆ ಯೋಚಿಸಬೇಡಿ, ಚಿಂತಿಸಬೇಡಿ ಎಂದು ಹೇಳುತ್ತಿಲ್ಲ. ಚಿಂತೆಯ ಬದಲು ಚಿಂತನೆ ಇರಲಿ. ಈ ಪರೀಕ್ಷೆಯಲ್ಲಿ ಫೇಲಾದರೇನಂತೆ ಮತ್ತೆ ಪುಟಿದೇಳಲು ಮುಂದಿನ ಅವಕಾಶ ಇದೆಯಲ್ಲ. ಇಂದಿನಿಂದಲೇ ಗುರುಗಳ ಮಾರ್ಗದರ್ಶನ ಪಡೆದು ಅಭ್ಯಾಸ ಮಾಡಿ ಖಂಡಿತ ಪಾಸಾಗುತ್ತೀರ. ಹಾಗೆಯೇ ಪರೀಕ್ಷೆಯ ಅಂಕಗಳು ಮುಂದಿನ ತರಗತಿಗೆ ಸೇರಿಕೊಳ್ಳಲು ರಹದಾರಿಗಳೇ ಹೊರತು ಅವೇ ಅಂತಿಮವಲ್ಲ. ಫೇಲಾದ ಮಾತ್ರಕ್ಕೆ ಧೃತಿಗೆಡಬೇಕಿಲ್ಲ. ಪರೀಕ್ಷೆಯಲ್ಲಿ ಫೇಲಾದರೂ ಧೃತಿಗೆಡದೆ ಓದಿ ಉನ್ನತಸ್ಥಾನಕ್ಕೇರಿದವರ ನೂರಾರು ಉದಾಹರಣೆಗಳು ನಮ್ಮ ಕಣ್ಮುಂದಿವೆ. ಸೋಲೇ ಗೆಲುವಿನ ಮೆಟ್ಟಿಲು ಎಂಬುದು ತಮಗೆ ನೆನಪಿದೆ ಯಲ್ಲವೇ?. ಧೈರ್ಯಂ ಸರ್ವತ್ರ ಸಾಧನಂ. ಆತ್ಮವಿಶ್ವಾಸವೇ ಯಶಸ್ಸಿನ ಮೂಲ ಆಧಾರ. ಹಾಗಾಗಿ ನಿಮ್ಮ ಬಗೆಗೆ ನಿಮಗೆ ಆತ್ಮವಿಶ್ವಾಸವಿರಲಿ.

ಈಗಂತೂ ಪರೀಕ್ಷೆಗಳ ಅಂಕಗಳ ಮೇಲೆ ನಾಲ್ಕಾರು ಹುದ್ದೆಗಳನ್ನು ತುಂಬುತ್ತಾರೆ ಬಿಟ್ಟರೆ ಎಲ್ಲವೂ ಸಿಇಟಿ ಅಂಕಗಳ ಮೇಲೆಯೇ ನೇಮಕಾತಿಗಳಾಗುತ್ತಿವೆ. ಹಾಗಾಗಿ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂತು ಅಂತ ಕೊರಗುವ ಬದಲು ಮುಂದಿನ ಭವಿಷ್ಯದ ಬಗ್ಗೆ ಆಲೋಚಿಸಿ. ಈ ನಿಟ್ಟಿನಲ್ಲಿ ಪಾಲಕ–ಪೋಷಕರು, ಸಮಾಜ, ಗುರುಹಿರಿಯರು ಫೇಲಾದ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವ ಮೂಲಕ ಮಾರ್ಗದರ್ಶನ ಮಾಡಬೇಕಾದ ತುರ್ತು ಇದೆ. ಹಾಗೆಯೇ ಶಿಕ್ಷಣ ಸಂಸ್ಥೆಗಳು ಸಹ ಗೆಲುವಿಗೆ ಹಿಗ್ಗದಿರುವ, ಸೋಲಿಗೆ ಕುಗ್ಗದಿರುವ "ಸಮಚಿತ್ತ ಭಾವ"ವನ್ನು ಮಕ್ಕಳಿಗೆ ಕಲಿಸಬೇಕಿದೆ. ಗೆದ್ದವರ ವಿಜೃಂಭಣೆಯ ಮಧ್ಯೆ ಸೋತವರ ನೋವುಗಳು ಮುಚ್ಚಿ ಹೋಗುವುದು ಬೇಡ.

ಆತ್ಮೀಯ ವಿದ್ಯಾರ್ಥಿಗಳೇ ನೂರಾರು ಅವಕಾಶಗಳು ನಿಮ್ಮ ಕಣ್ಮುಂದೆ ಇವೆ. ಮೊಬೈಲ್, ಟಿವಿ ನೋಡೋದು ಬಿಟ್ಟು ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವತ್ತ ಚಿತ್ತಹರಿಸಿ. ನಿಮ್ಮಿಷ್ಟದ ಕ್ಷೇತ್ರದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ. ಖಂಡಿತ ನಿಮ್ಮ ಗುರಿ ಮುಟ್ಟುವಿರಿ. ಯಾವ ಸಮಾಜ ನೀವು ಫೇಲಾದಾಗ ಬೇಸರಿಸಿಕೊಂಡಿತ್ತೋ, ಅದೇ ಸಮಾಜ ನಿಮ್ಮ ಬಗ್ಗೆ ಅಭಿಮಾನ, ಗೌರವ, ಹೆಮ್ಮೆಪಟ್ಟುಕೊಳ್ಳುವಂತೆ ಬೆಳೆಯಿರಿ. ಭವಿಷ್ಯದಲ್ಲಿ ಬೇರೆಯವರಿಗೆ ಸ್ಫೂರ್ತಿಯಾಗಿ. ಖಂಡಿತ ಈ ನಿಟ್ಟಿನಲ್ಲಿ ಯೋಚನೆ ಮಾಡ್ತಿರಲ್ವಾ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಭಕ್ತಿ ಜ್ಞಾನ ವೈರಾಗ್ಯಗಳ ಮೂರ್ತಿ ಸಜ್ಜಲಗುಡ್ಡದ ಶರಣಮ್ಮ ತಾಯಿ



ಇಂದಿನ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಮುದೇನೂರು ಗ್ರಾಮದಲ್ಲಿ 1875ರಲ್ಲಿ ನಿಂಗಪ್ಪ ಮತ್ತು ತಾಯಿ ನಿಂಗಮ್ಮರ ಪುಣ್ಯ ಗರ್ಭ ಸಂಜಾತೆಯಾದ ಯಮುನಮ್ಮ ಹುಟ್ಟಿದ ಕೆಲವೇ ದಿನಗಳಲ್ಲಿ ತಂದೆಯನ್ನು ಕಳೆದುಕೊಂಡು ಅಕ್ಷರಶಃ ಅನಾಥಳಾದರು. ಹಸಿವು, ಬಡತನವನ್ನು ಬೆನ್ನಲ್ಲಿ ಕಟ್ಟಿಕೊಂಡು ಹೊಟ್ಟೆಯ ತುತ್ತಿಗೆ ಮಗಳನ್ನು ಕರೆದುಕೊಂಡು ಊರೂರು ಅಲೆದು ಕೆಲಸ ಮಾಡುತ್ತಿದ್ದ ನಿಂಗಮ್ಮ ಮಠಮಾನ್ಯಗಳ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸ್ವಚ್ಛತಾ ಕಾರ್ಯಗಳನ್ನು ನಡೆಸಿಕೊಡುತ್ತಿದ್ದರು.

ಆ ತಾಯಿ ಮಗಳು ದುಡಿಮೆಯನ್ನು ಅರಸುತ್ತಾ ಕಂಪ್ಲಿ, ಸೂಗೂರು, ಕಂಬಾಳ್ಯಾಳಗಳಿಗೆ ಊರೂರು ಅಲೆಯುತ್ತಿದ್ದರು. ಹಗಲು ಕೂಲಿ ಕೆಲಸವನ್ನು ಮಾಡಿ ರಾತ್ರಿಯ ಹೊತ್ತಿಗೆ ಆಯಾ ಊರುಗಳಲ್ಲಿನ ಮಠಮಾನ್ಯಗಳಲ್ಲಿ ಪುರಾಣ ಪ್ರವಚನಗಳನ್ನು ಕೇಳುತ್ತಾ, ಆಧ್ಯಾತ್ಮದ ಅರಿವನ್ನು ಮೂಡಿಸಿಕೊಳ್ಳುತ್ತಿದ್ದರು.

ಹೀಗೆಯೇ ಒಂದು ಬಾರಿ ಅವರು ಕಂಬಳ್ಯಾಳ ಗ್ರಾಮಕ್ಕೆ ಆಗಮಿಸಿದ್ದ ಗುಡದೂರಿನ ಬಸವೇಶ್ವರ/ ಬಸವಾರ್ಯ ಶಿವಯೋಗಿಗಳು ಸೇವಾ ಕಾರ್ಯದಲ್ಲಿ ನಿರತರಾಗಿದ್ದ ಈ ತಾಯಿ ಮಕ್ಕಳ ಸೇವಾ ಮನೋಭಾವವನ್ನು ಮೆಚ್ಚಿ ಶ್ಲಾಘಿಸಿದರು. ತಾಯಿಯನ್ನು ಕುರಿತು ನಿನ್ನ ಮಗಳು ಒಳ್ಳೆ ಲಕ್ಷಣವಂತಳು.ಒಳ್ಳೆಯ ವರನನ್ನು ನೋಡಿ ಮಗಳಿಗೆ ಮದುವೆ ಮಾಡು ಎಂದು ಹೇಳಿದಾಗ ಈಗಾಗಲೇ ಮಗಳು ಐಹಿಕ ಸುಖ ಭೋಗಗಳನ್ನು ದೂರವಿಟ್ಟು ಆಧ್ಯಾತ್ಮ ಮಾರ್ಗದಲ್ಲಿ ಸಾಗುತ್ತಿರುವುದನ್ನು ಗಮನಿಸಿದ್ದ ಆ ತಾಯಿಯು "ಎಪ್ಪಾ, ನನ್ನ ಮಗಳನ್ನು ಮದುವೆಯ ಬಂಧನಕ್ಕೆ ಸಿಲುಕಿಸುವುದು ಬೇಡ, ಆಕೆಗೆ ಈ ಸಾಂಸಾರಿಕ ಜೀವನದಲ್ಲಿ ಎಳ್ಳಷ್ಟು ಆಸಕ್ತಿ ಇಲ್ಲ ಆಕೆಯನ್ನು ಯಾವುದಾದರೂ ಮಠಕ್ಕೆ ಸೇರಿಸಿಬಿಡು" ಎಂದು ಕೈ ಮುಗಿದು ಹೇಳಿದಳು. ಮಗಳ ಮುಖದಲ್ಲಿಯೂ ಅದೇ ಭಾವ ಗೋಚರಿಸಿದ್ದುದನ್ನು ಕಂಡು 'ಶಿವನಿಚ್ಛೆ'ಯೆಂದ ಶಿವಯೋಗಿಗಳು "ಆಯ್ತು ಒಮ್ಮೆ ಗುಡದೂರಿಗೆ ಬನ್ನಿ" ಎಂದು ಹೇಳಿ ಹೊರಟು ಹೋದರು.

ಮುಂದೆ ಕೆಲ ದಿನಗಳ ನಂತರ ಗುಡದೂರಿಗೆ ತಾಯಿ ಮಗಳು ಬಂದು ಶಿವಯೋಗಿಗಳ ದರ್ಶನ ಮಾಡಿ ಈ ಹಿಂದೆ ಪ್ರಸ್ತಾಪಿಸಿದ ವಿಷಯವನ್ನು ಜ್ಞಾಪಿಸಿದಾಗ ಶಿವಯೋಗಿಗಳು ಆಕೆಯ ಮಗಳನ್ನು ಕುರಿತು 'ನಿನಗೇನು ಬೇಕು ತಾಯಿ' ಎಂದು ಕೇಳಿದಾಗ ಆಕೆ "ಎಪ್ಪಾ... ನನಗೆ ಮೋಕ್ಷದ ಮಾರ್ಗವನ್ನು ತೋರಿಸು ನಾನು ಎಲ್ಲಿಂದ ಬಂದೆ ಮತ್ತು ಮತ್ತು ಎಲ್ಲಿಗೆ ಹೋಗುವೆ ಎಂಬ ಜ್ಞಾನವನ್ನು ನನಗೆ ತಿಳಿಸಿ ಕೊಡು" ಎಂದು ಕೇಳಿದಳು.

ಇದರಿಂದ ಅಚ್ಚರಿಗೊಂಡ ಶಿವಯೋಗಿಗಳು "ಎವ್ವಾ.. ಓದಾಕ ಬರಿಯಾಕ ಬರತೈತೇನು" ಎಂದು ಕೇಳಿದರು. ಇದಕ್ಕೆ ಉತ್ತರವಾಗಿ ಆ ಹೆಣ್ಣು ಮಗಳು "ಸ್ವಲ್ಪ ಸ್ವಲ್ಪ ಬರತೈತಿ ಯಪ್ಪಾ" ಎಂದು ಹೇಳಿದಳು.

ಕೂಡಲೇ ಆಕೆಯ ಕೈಯಲ್ಲಿ ತಾವು ಓದುತ್ತಿದ್ದ ಷಣ್ಮುಖ ಶಿವಯೋಗಿಗಳ ಅಖಂಡೇಶ್ವರರ ವಚನಗಳ ಪುಸ್ತಕದಲ್ಲಿನ ಗುರು ಕಾರುಣ್ಯದ ಅಧ್ಯಾಯವನ್ನು ಕೊಟ್ಟು ಅದನ್ನು ಓದಲು ಹೇಳಿದರು.

**ಗುರುವೇ ಪರತತ್ವವು ತಾನೆ ನೋಡಾ**
**ಗುರುವೇ ಪರ ವಸ್ತುವು ತಾನೇ ನೋಡಾ**
**ಗುರುವೇ ಪರಬ್ರಹ್ಮವೂ ತಾನೇ ನೋಡಾ**
**ಗುರುವಿಲ್ಲದೆ ಪರವಿಲ್ಲವೆಂದು**
**ಸಕಲ ಸಂಸ್ಕೃತಿಗಳು ಹೊಗಳುತ್ತವೆ ನೋಡಾ**
**ಗುರುವಿಂಗೆ ನಮೋ ನಮೋ ಎನ್ನುವೆನಯ್ಯ**



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಎಂಬ ಅಖಂಡೇಶ್ವರರ ವಚನವನ್ನು ಗುರುಗಳು ಪೂಜೆ ಮುಗಿಸಿ ಬರುವಷ್ಟರಲ್ಲಿ ಓದಿ ಬಾಯಿ ಪಾಠ ಮಾಡಿದ ಆಕೆ ಅವರಿಗೆ ಯಥಾವತ್ತಾಗಿ ಓದಿ ತೋರಿದರು.

ಆಕೆಯ ಅದ್ಭುತ ಜ್ಞಾಪಕ ಶಕ್ತಿಯನ್ನು ಕಂಡು ಬೆರಗಾದ ಶಿವಯೋಗಿಗಳು ಆಕೆಯನ್ನು ಮಗಳಾಗಿ ಸ್ವೀಕರಿಸಿ ವೀರವಿರಾಗಿಣಿ ಅಕ್ಕಮಹಾದೇವಿಯ ಜೀವನ ದರ್ಶನವನ್ನು ಮಾಡುತ್ತಿದ್ದು "ಇನ್ನು ಮುಂದೆ ಗುಡದೂರು ಮತ್ತು ಕಂಬಳ್ಯಾಳ ಗ್ರಾಮಗಳಲ್ಲಿ ನೀನು ವಾಸ ಮಾಡು, ಪ್ರತಿದಿನ ಐದು ಮನೆಗಳಲ್ಲಿ ಭಿಕ್ಷಾಟನೆ ಮಾಡಿ ಬಂದ ಆಹಾರವನ್ನು ನೀನು ಸೇವಿಸಬೇಕು, ಈ ಭಿಕ್ಷೆಯನ್ನು ಬೇಡುವಾಗಲೂ ಕೂಡ ಕೇವಲ ಒಂದು ಬಾರಿ ಮಾತ್ರ ಅವರನ್ನು ನೀನು ಕರೆಯಬೇಕು. ಕೊಟ್ಟರೆ ಮಾತ್ರ ಪಡೆ ಕೊಡದಿದ್ದರೆ ಮತ್ತೆ ಕೇಳಬಾರದು, ಕೊಟ್ಟಷ್ಟನ್ನು ಮಾತ್ರ ಪಡೆಯಬೇಕು ಹೆಚ್ಚಿನದಕ್ಕೆ ಅಪೇಕ್ಷ ಬೇಡ" ಎಂಬ ಕರಾರುಗಳನ್ನು ವಿಧಿಸಿದರು. ಪುಟ್ಟ ಯುವತಿ ಗುರುಗಳ ವಾಕ್ಯವನ್ನು ಶಿರಸಾ ಪಾಲಿಸಿ ಅಂತೆಯೇ ನಡೆದಳು.

"ಮನೆ ಮನೆಯ ಮುಂದೆ ತಪ್ಪದೇ ಕೈಯೊಡ್ಡುವಂತೆ ಮಾಡು, ಬೇಡಿದರೆ ಇಕ್ಕದಂತೆ ಮಾಡು ಇಕ್ಕಿದರೆ ನಾನೆತ್ತಿಕೊಳ್ಳುವ ಮುನ್ನ ಶುನಕ ಎತ್ತಿಕೊಳ್ಳುವಂತೆ ಮಾಡು" ಎಂಬ ಅಕ್ಕಮಹಾದೇವಿ ತಾಯಿಯ ವಚನದಂತೆ ಆಕೆ ಬೆಳೆಯುತ್ತಾಳೆ. ಗುರು ತೋರಿದ ಸಾಧನೆಯ ಮಾರ್ಗದಲ್ಲಿ ಜಪ–ತಪ, ನೇಮ ನಿಷ್ಠೆ, ಲಿಂಗ ಪೂಜೆ, ಅನುಷ್ಠಾನ ಗಳನ್ನು ಮಾಡುತ್ತಾ ಅಪಾರ ಮಹಿಮೆಗಳನ್ನು ತನ್ನದಾಗಿಸಿಕೊಳ್ಳುತ್ತಾರೆ. ಗುರುವಿನ ಮಾರ್ಗದರ್ಶನದಲ್ಲಿ ಸಾಗಿದ ಆಕೆ ಅಪಾರ ಮಹಿಮಾವಂತಳಾಗಿ, ದೇವಿ ಸ್ವರೂಪವಾಗಿ ಕಂಗೊಳಿಸಿದಳು.

ಅಮ್ಮನ ತಪ ಶಕ್ತಿಯ ಬಲದಿಂದ ಮಳೆ ಬೆಳೆಗಳಾಗುವುದು, ಮಕ್ಕಳ ಭಾಗ್ಯ ಬಯಸಿ, ಕಂಕಣ ಭಾಗ್ಯ ಬಯಸಿ ಬಂದವರಿಗೆ ಅವರ ಅಭೀಷ್ಟ ಸಿದ್ಧಿಯಾಗುವುದು ಹೀಗೆ ಸಕಾರಾತ್ಮಕ ಸಿದ್ದಿಗಳ ಮೂಲಕ ಭಕ್ತರ ಉದ್ಧಾರವನ್ನು ಮಾಡಿದ ಆಕೆ ತನ್ನ ಪೂರ್ವಾಶ್ರಮದ ಯಮುನಮ್ಮ ಎಂಬ ಹೆಸರಿನಿಂದ ಶರಣಮ್ಮ ಎಂಬ ಮರು ನಾಮಕರಣವನ್ನು ಹೊಂದಿದರು. ಬರಗಾಲದ ಪ್ರದೇಶವಾದ ರಾಯಚೂರು ಜಿಲ್ಲೆಯ ಈ ಭಾಗದ ಜನರು ಆಹಾರದ ಕೊರತೆಯಿಂದ ಬಳಲಬಾರದು ಎಂಬ ಆಶಯದಿಂದ ಇಲ್ಲಿಯ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಬಾರದು ಎಂಬ ಅಪೇಕ್ಷೆಯಿಂದ ಭಕ್ತರ ಒತ್ತಾಯದ ಮೇರೆಗೆ ಲಿಂಗಸೂರು ತಾಲೂಕಿನ ಸಜ್ಜಲಗುಡ್ಡಕ್ಕೆ ಬಂದು ನೆಲೆಸಿದ ಶರಣಮ್ಮ ತಾಯಿ ನಮ್ಮೆಲ್ಲರ ಆರಾಧ್ಯ ದೈವ ಸಜ್ಜಲ ಶ್ರೀ ಶರಣಮ್ಮ ತಾಯಿಯಾಗಿ ಎಲ್ಲರ ಪಾಲಿಗೆ ಮಹಾಮಾತೆಯಾಗಿ ಭಕ್ತ ಜನರ ಇಷ್ಟಾರ್ಥಗಳನ್ನು ಸಿದ್ಧಿಸುವ ನಿಟ್ಟಿನಲ್ಲಿ ಆ ಭಗವಂತ ಮತ್ತು ಭಕ್ತರ ನಡುವಿನ ಕೊಂಡಿಯಾದರು.

ಅಮ್ಮನ ಧೀಶಕ್ತಿ ತಪಶ್ಶಕ್ತಿ ಎಷ್ಟಿತ್ತು ಎಂದರೆ ಆಕೆ ಎಲ್ಲ ಗುರು ವಿರಕ್ತ ಪರಂಪರೆಯ ಮಠಮಾನ್ಯಗಳನ್ನು ಗೌರವಿಸಿದಳು ಆದರೆ ಆಕೆ ಎಂದು ಯಾರಿಂದಲೂ ಸಾಷ್ಟಾಂಗ ನಮಸ್ಕಾರವನ್ನು ಮಾಡಿಸಿಕೊಳ್ಳಲಿಲ್ಲ.

1960ರಲ್ಲಿ ಬಸವೇಶ್ವರ ಶಿವಯೋಗಿಗಳು ಲಿಂಗೈಕ್ಯರಾದಾಗ ಅವರ ಗಣಾರಾಧನೆಯನ್ನು ಐದು ಸೇರು ನುಚ್ಚು ಮತ್ತು ಐದು ಸೇರು ನವಣೆಯನ್ನು ತಂದು ಮಾಡಿದ್ದ ಅಮ್ಮನ ಮಠದಲ್ಲಿ ಇಂದು ಸಾವಿರಾರು ಜನರಿಗೆ ದಾಸೋಹ ಜರುಗುತ್ತದೆ.

ಒಂದೊಮ್ಮೆ ಬಾಗಲಕೋಟೆಯ ಬಳೂಲಮಠದ ವಕೀಲರ ಮನೆಯಲ್ಲಿ ಪಂಚಪೀಠದ ಶ್ರೀಮದ್ರಂಭಾಪುರಿ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮತ್ತು ಅನುಷ್ಠಾನಗಳು ನೆರವೇರುತ್ತಿದ್ದವು. ಗುರುಗಳ ಕಟ್ಟಪ್ಪಣೆಯನ್ನು ಜೀವನಪೂರ್ತಿ ಆಜ್ಞೆಯಂತೆ ನಡೆಸಿಕೊಂಡು ಬಂದ ಅಮ್ಮನವರು ಸಜ್ಜಲಗುಡ್ಡ ಮತ್ತು ಕಂಬಳ್ಯಾಳ ಗ್ರಾಮಗಳನ್ನು ಬಿಟ್ಟು ಬೇರೆಲ್ಲೂ ಹೋಗಲಿಲ್ಲ.... ಬಾಗಲಕೋಟೆಗೆ ರಂಭಾಪುರಿ ಪೀಠದ ಮಹಾಸ್ವಾಮಿಗಳ ಆಗಮನವನ್ನು ಕೇಳಿ ತಿಳಿದ ಖುದ್ದು ತನ್ನನ್ನು ಮೂಳ ಎಂದು ಸಂಭೋಧಿಸಿಕೊಳ್ಳುತ್ತಿದ್ದ 'ಈ ಮೂಳನ ಜೀವಕ್ಕೆ ಅಪ್ಪನ ದರ್ಶನದ ಭಾಗ್ಯವಿಲ್ಲ' ಎಂದು ಸಂಕಟಪಡುತ್ತ ಹೇಳಿದರು. ಈ ವಿಷಯವನ್ನು ರಂಭಾಪುರಿ ಜಗದ್ಗುರುಗಳಿಗೆ ಅರುಹಿದ ಬಳೂಲಮಠ ವಕೀಲರು ಅಮ್ಮನ ಸಂಕಟವನ್ನು ವಿವರಿಸಿದರು. ಪಂಚ ಪೀಠಾಧೀಶರಲ್ಲಿ ಒಬ್ಬರಾದ ನಾನು ಒಬ್ಬ ಹೆಣ್ಣುಮಗಳಿಗೆ ದರ್ಶನ ಭಾಗ್ಯವನ್ನು ಕರುಣಿಸಲು ಹೋಗಬೇಕೇ ಎಂದು ಈ ವಿಷಯವನ್ನು ನಿರ್ಲಕ್ಷಿಸಿದ ಗುರುಗಳಿಗೆ ಆ ದಿನ ರಾತ್ರಿಯೆಲ್ಲ ನಿದ್ದೆಯೇ ಸುಳಿಯದಾಯಿತು.ಅತ್ಯಂತ ಕಸಿವಿಸಿಯಿಂದ ಆ ರಾತ್ರಿಯನ್ನು ಕಳೆದ ಅವರು ಮರುದಿನ ಮುಂಜಾನೆ ತಾವು ಸಜ್ಜಲಗುಡ್ಡಕ್ಕೆ ಅಮ್ಮನವರಿಗೆ ದರ್ಶನ ನೀಡಲು ಬರುವುದಾಗಿ ಹೇಳಿ ಕಳುಹಿಸಿದರು.

ಗುರುಗಳ ಆಗಮನದ ಸುದ್ದಿಯನ್ನು ಕೇಳಿ ಇಡೀ ಗ್ರಾಮದ ಜನರಲ್ಲಿ ಸಂಚಲನ ಉಂಟಾಯಿತು. ಮನೆ ಮನೆಗಳಲ್ಲಿ, ತಳಿರು ತೋರಣ ರಂಗೋಲಿಗಳ ಅಲಂಕಾರವಾಗಿ ಸ್ವತಃ ಅಮ್ಮನೇ ಗುರುಗಳನ್ನು ಎದುರುಗೊಳ್ಳಲು ಆರತಿ ತಟ್ಟೆಯನ್ನು ಹಿಡಿದು ನಿಂತರು.

ಶ್ರೀಮದ್ರಂಭಾಪುರಿ ಪೀಠಾಧೀಶ ವೀರಗಂಗಾಧರ ಶಿವಾಚಾರ್ಯ ಸ್ವಾಮಿಗಳು ಗ್ರಾಮಕ್ಕೆ ಆಗಮಿಸಿದಾಗ ಅವರಿಗೆ ಪಾದ ಪೂಜೆ ಮಾಡಿ ಉಂಡೆ ಕರ್ಪೂರವನ್ನು ಬೆಳಗಿದ ಅಮ್ಮನ ಕೈಗಳು ಬಿಸಿಯಾದ ಆರತಿ ತಟ್ಟೆಯನ್ನು ಕೈಯಲ್ಲಿ ಹಿಡಿದ ಪರಿಣಾಮವಾಗಿ ಬೊಬ್ಬೆಗಳು ಉಂಟಾಗಿದ್ದವು. ಪೂಜೆ ಪುನಸ್ಕಾರಗಳು ನೆರವೇರಿಸಿ ಪ್ರಸಾದವನ್ನು ಸ್ವೀಕರಿಸಿದ ನಂತರ ಗುರು ದಕ್ಷಿಣೆಯನ್ನು ನೀಡಿ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಾರೆ ನಂತರ ಜರುಗಿದ ತಮ್ಮ ಆಶೀರ್ವಚನದಲ್ಲಿ ಗುರುಗಳು "ನಾವು ನಮ್ಮ ಪೂರ್ವಾಶ್ರಮದ ಎಲ್ಲ ಸಂಬಂಧಗಳನ್ನು ತೊಡೆದುಹಾಕಿ ಈ ಪೀಠಕ್ಕೆ ಬಂದಿರುತ್ತೇವೆ. ಅಂತಹ ಪಂಚ ಪೀಠಾಧೀಶರೆಲ್ಲರಿಗೂ ಯಾವುದಾದರೂ ಒಂದು ಸಂಬಂಧ ಇದೆ ಎಂದು ಕಲ್ಪಿಸುವುದಾದರೆ ಅದು ಸಜ್ಜಲಗುಡ್ಡದ ಶರಣಮ್ಮ ತಾಯಿಯ ಮಾತೃ ಹೃದಯದ ಸಂಬಂಧ, ನಾವೆಲ್ಲರೂ ಆಕೆಯ ಮಕ್ಕಳು" ಎಂದು ಗದ್ಗದಿತರಾಗಿ ಹೇಳುತ್ತಾರೆ. ಅಂತಹ ಧೀ ಶಕ್ತಿಯನ್ನು ಹೊಂದಿದ ಅಮ್ಮ ತಮ್ಮ ಬದುಕಿನ ಕೊನೆಯವರೆಗೂ ಗುರುವಿನ ರಕ್ಷೆ, ಗುರು ಹಾಕಿದ ಭಿಕ್ಷೆ, ಗುರು ತೋರಿದ ಮಾರ್ಗ ಮತ್ತು ಆತನ ಕಕ್ಷೆಯಲ್ಲಿಯೆ ತಾನಿದ್ದೇನೆ ಎಂಬ ಭಾವದಲ್ಲಿಯೇ ತನ್ನ ಗುರು ಬಸವೇಶ್ವರ ಶಿವಯೋಗಿಗಳ ಭಾವಚಿತ್ರವನ್ನು ಪಕ್ಕದಲ್ಲಿ ಇಟ್ಟುಕೊಂಡು ಅವರೇ ತನ್ನ ಮೂಲಕ ಎಲ್ಲ ಕೈಂಕರ್ಯಗಳನ್ನು ನಡೆಸಿಕೊಡುತ್ತಿದ್ದಾರೆ, ತಾನು ಕೇವಲ ಅವರ ನಿಯಾಮಕಳು ಎಂಬಂತೆ ನಡೆದುಕೊಂಡು ಗುರುವನ್ನು ಮೀರಿದ ಮಹಾನ್ ಸಾಧಕಿಯಾದರು. 1981ರ ಏಪ್ರಿಲ್ 24ರಂದು ಅಮ್ಮ 105 ವರ್ಷಗಳ ಕಾಲ ಮೋಕ್ಷ ಸಾಧನೆಯ ಪರಮೋಚ್ಚ ಬದುಕನ್ನು ಸಾಧಿಸಿ ಲಿಂಗೈಕ್ಯರಾದರು.

ಬಡವ– ಬಲ್ಲಿದ, ಮೇಲು– ಕೀಳು, ಸ್ಪೃಶ್ಯ– ಅಸ್ಪೃಶ್ಯ ಎಂಬ ತಾರತಮ್ಯವಿಲ್ಲದೆ ಎಲ್ಲರನ್ನೂ ಅಪ್ಪ ಅವ್ವ ಎಂದು ಸಂಬೋಧಿಸಿ ಪ್ರೀತಿಯಿಂದ ಆಶೀರ್ವದಿಸುತ್ತಿದ್ದ ಅಮ್ಮನ ಲೀಲೆಗಳು ಅಪಾರ.

ಹಿಡಿ ನುಚ್ಚಿಗೆ ಪರದಾಡುತ್ತಿದ್ದ ಮಠದಲ್ಲಿ, ಗ್ರಾಮೀಣ ಭಾಗದ ಮಕ್ಕಳು ಆಹಾರ ಮತ್ತು ವಿದ್ಯೆಯ ಕೊರತೆಯಿಂದ ಬಳಲಬಾರದು ಎಂಬ ಭಕ್ತರ ಅಪೇಕ್ಷೆಯ ಮೇರೆಗೆ ಸಜ್ಜಲಗುಡ್ಡದಲ್ಲಿ ಶಾಲೆಯನ್ನು ಅಮ್ಮ ಆರಂಭಿಸಿದರು. ಇದೀಗ ಹಲವಾರು ಶಾಲೆಗಳು ಇವರ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಿದ್ದಾರೆ.

1947ರಲ್ಲಿ ಪ್ರಸಾದ ನಿಲಯವನ್ನು ಆರಂಭಿಸಲಾಯಿತು. ಅಮ್ಮನ ಮಡಿಲಿನ ಕೃಪಾಶೀರ್ವಾದದಲ್ಲಿ ಬೆಳೆದ ನೂರಾರು ಸಾವಿರಾರು ಬಡ ಮಕ್ಕಳು ಇಂದು ಉನ್ನತ ಹುದ್ದೆಗಳಲ್ಲಿ ಇದ್ದು ಅವರ ಅಭ್ಯುದಯಕ್ಕೆ ಕಾರಣವಾದದ್ದು ಅಮ್ಮನ ಅಂತಃ ಕರಣ. ಮೂರು ವರ್ಷಗಳ ಹಿಂದೆ 2022ರಲ್ಲಿ ಅಮ್ಮನ ಪ್ರಸಾದ ನಿಲಯದ ಹಳೆಯ ವಿದ್ಯಾರ್ಥಿಗಳ ಸಂಘದ ವಿದ್ಯಾರ್ಥಿಗಳೆಲ್ಲರೂ ಸೇರಿ ಅಮ್ಮನ ನೆನಪಿನಲ್ಲಿ 50 ಲಕ್ಷಕ್ಕೂ ಹೆಚ್ಚು ಹಣವನ್ನು ಸಂಗ್ರಹಿಸಿ ಹರ ಗುರು ಚರಮೂರ್ತಿಗಳನ್ನು ಕರೆಯಿಸಿ ಬಹುದೊಡ್ಡ ಸಮಾರಂಭವನ್ನು ಏರ್ಪಡಿಸಿ ಬಸವ ಆರ್ಯ ಶಿವಯೋಗಿಗಳ ಪುಣ್ಯಸ್ಮರಣೆಯನ್ನು ಆಚರಿಸಿ ಬೆಳ್ಳಿಯ ಮೂರ್ತಿಯನ್ನು ಮಾಡಿ ಅರ್ಪಿಸಿದರು.

ಸುಕ್ಷೇತ್ರ ಸಜ್ಜಲಗುಡ್ಡದ ಶಿವ ಶರಣೆ ಶರಣಮ್ಮನವರ ಮಠ ಆಧ್ಯಾತ್ಮಿಕ ಚಿಂತನೆ, ಶಿವಾನುಭವ, ಸಂಸ್ಕೃತ, ವೇದ ಪಾಠದ ಉಚಿತ ಬೋಧನೆ ಮಾಡುವ ಜಿಲ್ಲೆಯ ಅಪರೂಪದ ಮಠವಾಗಿದ್ದು, ಅಂದು ಕೇವಲ ಐದು ಗಣಗಳಿಗೆ ಪ್ರಸಾದ ಮಾಡಿಸುತ್ತಿದ್ದ ಕ್ಷೇತ್ರ ಇಂದು ಲಕ್ಷಾಂತರ ಭಕ್ತರಿಗೆ ದಾಸೋಹ ಮಾಡಿಸುವ ಪುಣ್ಯಕ್ಷೇತ್ರವಾಗಿ ಬೆಳೆದಿದೆ. ಜಾಗೃತ ಕ್ಷೇತ್ರವಾಗಿ ನಾಡಿನ ಸಕಲ ಭಕ್ತರನ್ನು ಕೈಬೀಸಿ ಕರೆಯುತ್ತಿದ್ದು ಶರಣಮ್ಮ ತಾಯಿಯ ಹಸ್ತಗಳು ಭಕ್ತರಿಗೆ ಅಭಯ ಹಸ್ತಗಳಾಗಿ ಈ ಕ್ಷೇತ್ರದಲ್ಲಿ ನೆಲೆ ನಿಂತಿವೆ. 2021 ರಲ್ಲಿ ಅಮ್ಮನ ಸ್ವರ್ಣ ಮಹೋತ್ಸವ ಕಾರ್ಯಕ್ರಮವನ್ನು ಮಾಡಿದ್ದು ಮಾತೃ ಹೃದಯ ಎಂಬ ಸ್ಮರಣ ಸಂಚಿಕೆಯನ್ನು ಈ ವರ್ಷದ ಜಾತ್ರಾ ಮಹೋತ್ಸವದಲ್ಲಿ ಬಿಡುಗಡೆ ಮಾಡುವ ಶ್ರೀ ಕ್ಷೇತ್ರದ ಭಕ್ತಗಣ ಸನ್ನಾಹದಲ್ಲಿದೆ. ಆ ನಿಟ್ಟಿನಲ್ಲಿ ಬರೆದ ಈ ಲೇಖನ ಅಮ್ಮನ ಪಾದಪದ್ಮಗಳಿಗೆ ಸಲ್ಲಲಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಮೈಕ್ರೋ ನ್ಯೂಸ್

## ನಡೆ–ನುಡಿ

ಬಿಡಿ–ಸಿಗರೇಟ್ ಸೇದಿ ಸೇದಿ
ಎದೆಯ ಗೂಡು ಸುಟ್ಟುಕೊಂಡು ।
ಗುಟ್ಕಾ–ತಂಬಾಕು ತಿಂದು ತಿಂದು
ಕ್ಯಾನ್ಸರ್ ಗೆ ದಾರಿ ಮಾಡಿಕೊಂಡು ॥

ಆಲ್ಕೋಹಾಲ್ ಕುಡಿದು ಕುಡಿದು
ರೋಗ–ರುಜಿನ ಪಡೆದುಕೊಂಡು ।
ಮಟ್ಕಾ–ಇಸ್ಪೀಟ್ ಆಡಿ ಆಡಿ
ಹಣ ಆಸ್ತಿ ಕಳೆದುಕೊಂಡು ॥

ದುಶ್ಚಟಗಳ ದಾಸರಾಗಿ
ಆಗಬೇಡಿ ನಿತ್ಯ ರೋಗಿ ।
ದುಶ್ಚಟಗಳನ್ನು ಬಿಟ್ಟು
ದುರಾಸೆಯ ಜೂಜನು ಸುಟ್ಟು ॥

ಸತ್ವಾಹಾರ ಸೇವನೆ ಮಾಡಿ
ಧ್ಯಾನ–ಪ್ರಾಣಾಯಾಮ ಮಾಡಿ ।
ಬಂಧು–ಮಿತ್ರರ ಜೊತೆಗೂಡಿ
ಸರಳ ಸುಖಿ ಜೀವನ ಮಾಡಿ ॥

ಏನಾದರೂ ಆಗಲಿ
ನಗುವೊಂದೇ ಇರಲಿ ॥

– ಕೆ ಕುಮಾರಸ್ವಾಮಿ
ಶಿಕ್ಷಕರು ಹಾರಕಭಾವಿ

## ತಂತು

ಕಡಿದುಕೊಳ್ಳಲೆಂದೇ ಸ್ನೇಹ ತಂತುವಿನ ಕೈ ಹಿಡಿದಿದ್ದೆ
ಎಂದರಿವಾಗುವ ಮುನ್ನವೇ
ಹರಿದುಕೊಳ್ಳಲು ಬಂದಿದ್ದೆ

ನನ್ನೊಳಗಿನ ಹರಿವು ಅರಿವಾಗಲೇ ಇಲ್ಲ
ನನ್ನ ಸ್ನೇಹವ ಕಳೆಯಂತೆ ಕಿತ್ತದ್ದು
ಮರೆಯಲಾಗಲಿಲ್ಲ

ನಾನೋ ಅತ್ಯಾಪ್ತನ ಆತ್ಮಕೇ ಅಂಟಿಕೊಂಡವಳು
ಮಧುರ ಬಾಂಧವ್ಯವೇ ಬದುಕೆಂದು
ನಂಬಿಕೊಂಡವಳು

ಚೂರಾದ ಮನಸ ಮುಚ್ಚಿಬಿಡಲು
ಕಲ್ಲುಬಂಡೆಯೇ ಬೇಕಿಲ್ಲ
ಕಲ್ಲಂತ ಮನಸಿನ ಮಾತುಗಳ ಹತ್ಯಾರವೇ
ಸಾಕಲ್ಲ

ಬೇಕೆಂದಾಗ ಬೆಸೆದು ಬಿಡುವ
ಬೇಡವೆಂದಾಗ ಬಸಿದು ಬಿಡುವವನೇ
ನಿರೀಕ್ಷೆಯನೇ ನಿರ್ಲಕ್ಷಿಸಿ
ಕಣ್ಣಮುಂದಿರುವುದ ಕಡೆಗಣಿಸಿದವನೇ

ತಿರುಳಿಲೆಂದು ತಳ್ಳಿ ಹೋಗುವ ಮೊದಲೇ
ತಾಲೀಮು ನಡೆದಿತ್ತೇ....
ಮೌನದ ಅಗಾಧ ದಳ್ಳುರಿಯಲಿ ಮಾತುಗಳ
ದಾಸ್ತಾನು
ಸುಟ್ಟು ಭಸ್ಮವಾಗಿತ್ತೇ.....

ಅಪರಿಚಿತನಾಗ ಬಯಸಿದವಗೆ ಪರಿಚಯದ
ಮುಖವಾಡ ಬೇಕಿತ್ತೇ
ಬೆನ್ನು ತಿರುಗಿಸಲು ಕ್ಷುಲ್ಲಕ ಕಾರಣ ಸಾಕಿತ್ತೇ

ನಿನ್ನೊಲವ ಪದಗಳ ಗೂಡಿನಲಿ ಗರಿ
ಬಿಚ್ಚುವ ಹಕ್ಕಿ ನಾನಲ್ಲ
ಕಣ್ಣಿಗೆ ಗೋಚರಿಸಿದ ದಾರಿಯೆಲ್ಲ ನನ್ನದೇ
ಹಾದಿಯಲ್ಲ

ಎಂಬರಿವಿನ ಕುರುಹಿರುವವಳ ವಿಶ್ವಾಸವ
ಹೊಸಕಿ
ಒಲವ ತೋಟಕೆ ಲಗ್ಗೆಯಿಟ್ಟು ಧ್ವಂಸ
ಮಾಡಿ ಮನದ ಮೊಗ್ಗನು ಹಿಚುಕಿ

ದೂಷಿಸಿ ದೂರಾಗುವ ಮುನ್ನ
ಧಮನಿ ಧಮನಿಗಳ ದಿಟ್ಟಿಸದಾದೆಯ
ಮರುಳ
ಅಂತಃಸಾಕ್ಷಿಯನ್ನೊಮ್ಮೆ
ಸಾಕ್ಷೀಕರಿಸಬೇಕಿತ್ತು ಅಂತರಾತ್ಮವ ಕೊಂದು
ತೆರಳುವ ದುರುಳ

– ಶೋಭಾ ಮಲ್ಲಿಕಾರ್ಜುನ್
ಶಿಕ್ಷಕಿ, ಚಿತ್ರದುರ್ಗ.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**18–04–2025 – ಶುಕ್ರವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಜ್ಯೇಷ್ಠ |
| ಯೋಗ | : ಪರಿಘ |
| ಕರಣ | : ತೈತುಲ |
| ಸೂರ್ಯೋದಯ | : 06:04:57 |
| ಸೂರ್ಯಾಸ್ತ | : 18:47:48 |
| ರಾಹು ಕಾಲ | : 10:51–12:26 |
| ಯಮಘಂಡ ಕಾಲ | : 15:37–17:12 |
| ಗುಳಿಕ ಕಾಲ | : 07:40–09:16 |

# ಕರ್ನಾಟಕದ ಮುಕುಟ ಬೀದರ್‌ನಲ್ಲಿ 2025 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಸಿಎಂ


**ಹಂಪಿ ಟೈಮ್ಸ್ ಬೀದರ್**

ಗ್ಯಾರಂಟಿಗಳನ್ನು ಜಾರಿ ಮಾಡಿ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಬೀದರ್ ಜಿಲ್ಲೆಯಲ್ಲಿ ರೂ 2025 ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಸಮಾರಂಭ ಹಾಗೂ ಬೀದರ್ ಹಾಗೂ ಬೆಂಗಳೂರು ನಾಗರಿಕ ವಿಮಾನ ಸೇವೆಯ ಪುನರಾರಂಭ ಕಾರ್ಯಕ್ರಮ ದಲ್ಲಿ ಭಾಗವಹಿಸಿ* ನಂತರ ಕಾರ್ಯಕ್ರಮ ವನ್ನು ಉದ್ದೇಶಿಸಿ ಮಾತನಾಡಿದರು. 2025ರ ಮೇ 20 ರಂದು ಸರ್ಕಾರಕ್ಕೆ ಎರಡು ವರ್ಷ ತುಂಬಲಿದ್ದು, ಸರ್ಕಾರದ ಎರಡು ವರ್ಷದ ಸಾಧನೆಯ ಕಾರ್ಯಕ್ರಮವನ್ನು ರಾಜ್ಯದ ಯಾವುದಾದರೂ ಜಿಲ್ಲೆಯಲ್ಲಿ ಆಚರಿಸಲಿದ್ದೇವೆ. ಕರ್ನಾಟಕ ರಾಜ್ಯದ ಮುಕುಟ ಎಂದೇ ಕರೆಯಲ್ಪಡುವ ಬೀದರ್ ಜಿಲ್ಲೆಯಲ್ಲಿ ಇಂದು 2025 ಕೋಟಿ. ರೂ. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ಶಾಸಕ ರಹೀಂ ಖಾನ್ ರವರು ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡುತ್ತಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಸಾಗರ್ ಖಂಡ್ರೆಯವರು ಭವಿಷ್ಯದಲ್ಲಿ ಉತ್ತಮ ಜನನಾಯಕನಾಗಿ ಹೊರಹೊಮ್ಮಲಿ ಎಂದು ಶುಭ ಹಾರೈಸಿದರು. ಬೀದರ್ ನ ಎಲ್ಲ ಕ್ಷೇತ್ರಗಳಿಗೆ ಭೇಟಿ ನೀಡಿದ್ದೇನೆ ಎಂದರು.

**ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಟೀಕಿಸಿದ ಬಿಜೆಪಿ**

ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಚುನಾವಣಾ ಪೂರ್ವದಲ್ಲಿ ನೀಡಿದ್ದ ಐದು ಭರವಸೆಗಳನ್ನು ಕಾಂಗ್ರೆಸ್ ಸರ್ಕಾರ ಜಾರಿ ಮಾಡಿದೆ. ಗ್ಯಾರಂಟಿಗಳನ್ನು ಜಾರಿಮಾಡಲು ಸಾಧ್ಯವಿಲ್ಲ ಹಾಗೂ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಪ್ರಧಾನಿ ಮೋದಿಯವರು ಹಾಗೂ ಬಿಜೆಪಿಯವರು ಟೀಕೆ ಮಾಡಿದರು.ಕಾಂಗ್ರೆಸ್ ಪಕ್ಷ ಕೊಟ್ಟ ಮಾತಿನಂತೆ ನಡೆಯುತ್ತದೆ ಎಂಬುದನ್ನು ಜನರು ಅರಿತಿದ್ದಾರೆ. ಆದ್ದರಿಂದಲೇ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ರಾಜ್ಯದ ಜನ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೆ ಎಂದರು.




**ದೇಶದಲ್ಲಿ ಬೆಲೆಯೇರಿಕೆಯಾಗಲು ಕೇಂದ್ರದ ಬಿಜೆಪಿ ಸರ್ಕಾರ ಕಾರಣ**

ಪ್ರತಿಪಕ್ಷಗಳು ಗ್ಯಾರಂಟಿ ಯೋಜನೆ ಜಾರಿ ಮಾಡಿ ಅಭಿವೃದ್ಧಿ ಕೆಲಸಗಳಿಗೆ ತಿಲಾಂಜಲಿ ಇಟ್ಟಿದ್ದಾರೆ ಎಂದು ಆರೋಪಿಸುತ್ತಾರೆ. ಬಿಜೆಪಿಯ ಆರ್.ಅಶೋಕ್, ನಾರಾಯಣಸ್ವಾಮಿ ಹಾಗೂ ವಿಜಯೇಂದ್ರ ಅವರು ಬೀದರ್ ಬಂದು ನೋಡಲು ಆಹ್ವಾನ ನೀಡುತ್ತೇನೆ ಎಂದು ಸವಾಲು ಹಾಕಿದ ಮುಖ್ಯಮಂತ್ರಿಗಳು, ಸರ್ಕಾರ ದಿವಾಳಿಯಾಗಿದ್ದರೆ 2025 ಕೋಟಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲು ಸಾಧ್ಯವಾಗುತ್ತಿತ್ತೆ ಎಂದರು. ಬಿಜೆಪಿ ರಾಜ್ಯಾದ್ಯಂತ ಜನಾಕ್ರೋಶ ಯಾತ್ರೆ ಕೈಗೊಂಡಿದ್ದಾರೆ. ಬಿಜೆಪಿಗೆ ಮಾನ ಮರ್ಯಾದೆ ಇದ್ದರೆ, ಕಿಂಚಿತ್ತಾದರೂ ಜನಪರವಾದ ಕಾಳಜಿ ಇದ್ದರೆ ಸುಳ್ಳು ನಾಟಕವನ್ನು ಬಂದ್‌ಮಾಡಬೇಕು.ದೇಶದಲ್ಲಿಬೆಲೆಯೇರಿಕೆಯಾಗಿದ್ದರೆ ಕೇಂದ್ರದ ಬಿಜೆಪಿ ಸರ್ಕಾರ ಕಾರಣ ಎಂದರು.

**ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಜನಾಕ್ರೋಶ ಯಾತ್ರೆ**

ಮನ್ ಮೋಹನ್ ಸಿಂಗ್ ಅವರ ಸರ್ಕಾರವಿದ್ದಾಗ ಪೆಟ್ರೋಲ್ ಬೆಲೆ 73 ರೂ. ಹಾಗೂ ಡೀಸೆಲ್ ಬೆಲೆ 46.59 ಪೈಸೆ ಇತ್ತು. ಇಂದು ಎಷ್ಟಾಗಿದೆ? ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು ಅಚ್ಚೆ ದಿನ್ ಬರುತ್ತದೆ ಎಂದು ನರೇಂದ್ರ ಮೋದಿ ಹೇಳಿದ್ದರು. ಅಚ್ಚೆ ದಿನ್ ಬಂದಿದೆಯೇ ಎಂದು ಪ್ರಶ್ನಿಸಿದರು. ಅಬಕಾರಿ ಡ್ಯೂಟಿ ಡೀಸೆಲ್ ಮೇಲೆ 100.45 ರೂಗಳಿತ್ತು. 9.40 ರೂ ಪೆಟ್ರೋಲ್ ಮೇಲಿತ್ತು ಇಂದು ಎಷ್ಟಾಗಿದೆ ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ 118 ರಿಂದ 120 ರೂ.ವರೆಗಿತ್ತು. ಮೊನ್ನೆಯವರೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಕಡಿಮೆಯಾಗಿದೆ. 35 ಡಾಲರ್ ಗಳಿಗೆ ಇಳಿದಿದೆ. 120 ಡಾಲರ್ ಇರುವಾಗ ಪೆಟ್ರೋಲ್ ಬೆಲೆ 73, ಡೀಸಲ್ ಬೆಲೆ 46 ರೂ.ಗಳಿದ್ದರೆ , ಇಂದು 90 ರೂ.ಗಳಿಗಿಂತ ಹೆಚ್ಚು ಮಾಡಿದ್ದಾರೆ. ಇದಕ್ಕೆ ನರೇಂದ್ರ ಮೋದಿಯವರ ಕೇಂದ್ರ ಸರ್ಕಾರ. ಬಿಜೆಪಿಯವರಿಗೆ ಮಾನ ಮರ್ಯಾದೆ ಇದ್ದರೆ ಇದ್ದನ್ನು ಕೇಳಬೇಕು. ಗ್ಯಾಸ್ ಸಿಲಿಂಡರ್ ಬೆಲೆ 420 ರೂ ಇತ್ತು, ಈಗ ಸಾವಿರ ರೂಪಾಯಿಗೆ ಏರಿದೆ. ಅವರ ಆಡಳಿತದ ತಪ್ಪುಗಳನ್ನು ಮುಚ್ಚಿಕೊಂಡು ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಜನಾಕ್ರೋಶ ಯಾತ್ರೆ ಕೈಗೊಂಡಿದ್ದಾರೆ. ಬಿಜೆಪಿ ಲಜ್ಜೆಗೆಟ್ಟವರು. 2018 ರಲ್ಲಿ ನೀಡಿದ್ದ 400 ಭರವಸೆಗಳಲ್ಲಿ 10% ಭರವಸೆಗಳನ್ನು ಈಡೇರಿಸಲಾಗಲಿಲ್ಲ. 2008,2018 ರಲ್ಲಿ ಜನರ ಆಶೀರ್ವಾದ ಪಡೆದು ಅಧಿಕಾರಕ್ಕೆ ಬಂದಿಲ್ಲ. ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದರು. ಆಪರೇಶನ್ ಕಮಲ ಮಾಡಿ ಅಧಿಕಾರಕ್ಕೆ ಬಂದವರು ನಮಗೆ ಪಾಠ ಹೇಳಲು ಬರುತ್ತಾರೆ. ಇವರು ಜನವಿರೋಧಿ ಸರ್ಕಾರ ಎಂದು ಹಣೆಪಟ್ಟಿ ಹಚ್ಚಲು ಹೊರಟಿದ್ದಾರೆ.

ಕಳೆದ ವರ್ಷ 3 ಲಕ್ಷ 71ಸಾವಿರ ಕೋಟಿ ರೂ.ಗಳ ಬಜೆಟ್ ಮಂಡಿಸಿದ್ದು, ಈ ವರ್ಷ 4 ಲಕ್ಷದ 9 ಸಾವಿರ ಕೋಟಿ ರೂ.ಗಳ ಬಜೆಟ್ ಮಂಡಿಸಲಾಗಿದೆ. ಆರ್ಥಿಕವಾಗಿ ಸದೃಢವಿದ್ದುದ್ದಕ್ಕೆ 38 ಸಾವಿರ ಕೋಟಿ ಗಳಿಗೆ ಬಜೆಟ್ ಗಾತ್ರ ಹೆಚ್ಚಿಸಲು ಸಾಧ್ಯವಾಯಿತೆಂದರು.

**ಕರ್ನಾಟಕ ಆರ್ಥಿಕವಾಗಿ ಸದೃಢವಾಗಿದೆ**

ಕಳೆದ ವರ್ಷ 56 ಸಾವಿರ ಕೋಟಿ ಬಂಡವಾಳ ವೆಚ್ಚ ಮಾಡಿದ್ದರೆ, ಈ ವರ್ಷ 83 ಸಾವಿರ ಕೋಟಿ. ಗಳ ಬಂಡವಾಳ ವೆಚ್ಚ ಮಾಡಲಾಗುವುದು. ದಿವಾಳಿಯಾಗಿರುವ ಸರ್ಕಾರ ಬಂಡವಾಳ ವೆಚ್ಚ ಮಾಡಲು ಸಾಧ್ಯವಿಲ್ಲ. 2002 ರಲ್ಲಿ ವಿತ್ತೀಯ ಹೊಣೆಗಾರಿಕೆ ಕಾಯ್ದೆಯನ್ನು ಕರ್ನಾಟಕದಲ್ಲಿ ಜಾರಿ ಮಾಡಿದ್ದು, ಅದರ ಮೂರು ಮಾನದಂಡಗಳ ಪ್ರಕಾರ ಬಜೆಟ್ ಮಂಡನೆ ಮಾಡುವಾಗ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದ್ದರೆ ರಿವನ್ಯೂ ಸರ್ಪ್ಲಸ್ ಇರಬೇಕು. ಸಾಲ ಮಾಡುವಾಗ ಜಿಡಿಪಿ ಯ 25% ಒಳಗಿರಬೇಕು. ನಾವು ಈ ಮಾನದಂಡಗಳ ಒಳಗೆ ಇದ್ದೇವೆ. ನಾವು ಅಭಿವೃದ್ಧಿಗೆ, ಗ್ಯಾರಂಟಿ ಯೋಜನೆಗಳಿಗೆ ಹಣವನ್ನು ಮೀಸಲಿಟ್ಟಿದ್ದೇವೆ. ಕಳೆದ ವರ್ಷ ಗ್ಯಾರಂಟಿಗಳಿಗೆ 52009 ಸಾವಿರ ಕೋಟಿ ಮೀಸಲಿಟ್ಟು,ಈ ವರ್ಷ 50,018 ಕೋಟಿ ಗಳನ್ನು ಮೀಸಲಿಟ್ಟಿದ್ದು, ಕರ್ನಾಟಕ ಆರ್ಥಿಕವಾಗಿ ಸದೃಢವಾಗಿದೆ. ಆದ್ದರಿಂದಲೇ 2025 ಕೋಟಿ ರೂ.ಗಳ ಅಭಿವೃದ್ಧಿ ಕಾರ್ಯಗಳನ್ನು ರೂಪಿಸಲಾಗಿದೆ ಎಂದರು.

**ಸುಳ್ಳೇ ಬಿಜೆಪಿ ಮನೆದೇವರು**

ಬಿಜೆಪಿ ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಸುಳ್ಳು ಅವರ ಮನೆದೇವರು. ರಾಜ್ಯದ ಜನರನ್ನು ಸುಳ್ಳು ಹೇಳಿ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಸರ್ಕಾರ, ಹಾಗೂ ನನ್ನ ಮೇಲೆ ಅಪಪ್ರಚಾರ ,ಸುಳ್ಳು ಆಪಾದನೆಗಳನ್ನು ಮಾಡಿದ್ದಾರೆ. ಆದರೂ ಮೂರೂ ಉಪಚುನಾವಣೆಗಳಲ್ಲಿ ನಾವು ಗೆದ್ದಿದ್ದೇವೆ ಎಂದರು.

## ಏ.19 ಜೆಸ್ಕಾಂ ಗ್ರಾಮೀಣ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಗ್ರಾಮೀಣ ಜೆಸ್ಕಾಂ ಉಪವಿಭಾಗ ಕಚೇರಿಯಲ್ಲಿ ಏಪ್ರಿಲ್ 19 ರಂದು ಮಧ್ಯಾಹ್ನ 12 ಗಂಟೆಗೆ ಗ್ರಾಮೀಣ ಗ್ರಾಹಕರ ಸಂವಾದ ಸಭೆಯನ್ನು ಹಮ್ಮಿಕೊಂಡಿದ್ದು, ಹೊಸಪೇಟೆ (ನಗರ ಹೊರತುಪಡಿಸಿ) ತಾಲೂಕಿನ ವಿದ್ಯುತ್ ಗ್ರಾಹಕರು ಸಂವಾದ ಸಭೆಯಲ್ಲಿ ಭಾಗವಹಿಸಿ ವಿದ್ಯುತ್ ಸಮಸ್ಯೆಗಳಿದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು ಎಂದು ಗ್ರಾಮೀಣ ಕಾರ್ಯ ಮತ್ತು ಪಾಲನೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

## ಕೊಟ್ಟೂರಲ್ಲಿ ರಸ್ತೆಗುರುಳಿದ ಮರಗಳು ಪೌರ ಕಾರ್ಮಿಕರಿಂದ ತೆರವು


**ಹಂಪಿ ಟೈಮ್ಸ್ ಕೊಟ್ಟೂರು**

ಬುಧವಾರ ರಾತ್ರಿ ಸುರಿದ ಮಳೆ, ಗಾಳಿಗೆ ಪಟ್ಟಣದ ಹಲವು ಕಡೆ ರಸ್ತೆಗೆ ಮರಗಳು ಉರುಳಿ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯಾಗಿದ್ದ ಮರಗಳನ್ನು ಪಟ್ಟಣ ಪಂಚಾಯಿತಿ ಪೌರ ಕಾರ್ಮಿಕರು ತೆರವುಗೊಳಿಸಿ ಪಟ್ಟಣದ ಜನರ ಪ್ರಶಂಸೆಗೆ ಪಾತ್ರರಾದರು.

ಪಟ್ಟಣದಲ್ಲಿ ಮಳೆ, ಗಾಳಿಗೆ ಮರಗಳು ರಸ್ತೆಗೆ ಬಿದ್ದರೆ ಅರಣ್ಯ ಇಲಾಖೆ ಸಿಬ್ಬಂದಿ ಕೆಲಸವನ್ನು ಇಲ್ಲಿನ ಪಟ್ಟಣ ಪಂಚಾಯಿತಿ ಪೌರ ಕಾರ್ಮಿಕರು ತೆರವು ಮಾಡುವ ದುಸ್ಥಿತಿ ಇಲ್ಲಿ ನಿರ್ಮಾಣವಾಗಿದೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

ಕೊಟ್ಟೂರು ಪಟ್ಟಣದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇದ್ದು ಇಲ್ಲದಂತಾಗಿದ್ದಾರೆ, ಮಳೆ ಗಾಳಿ ಬೀಸಿದ ಸಂದರ್ಭದಲ್ಲಾದರೂ ಎಚ್ಚೆತ್ತುಕೊಂಡು ಕಾರ್ಯನಿರ್ವಹಿಸ ಬೇಕಾದ ಇಲಾಖೆ ಅಧಿಕಾರಿಗಳೇ ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಿರುವರು ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳಾಗಲಿ ಮರಗಳು ಬಿದ್ದರೆ ತಿರುಗಿ ನೋಡುವುದಿಲ್ಲ. ಪಟ್ಟಣದಲ್ಲಿ ಕರ್ತವ್ಯ ನಿರ್ವಹಿಸುವುದನ್ನು ಕೂಡಾ ಕಂಡಿಲ್ಲ ಎಂಬುದು ಸಾರ್ವಜನಿಕರ ಚರ್ಚೆಗೆ ಗ್ರಾಸವಾಗಿದೆ. ಜೆಸ್ಕಾ ಇಲಾಖೆ, ವಿದ್ಯುತ್ ತಂತಿ ಅಡಾಚಣೆಗೆ ಜೆಂಗಲ್ ಕಟ್ಟಿಂಗ್ ಮಾಡುತ್ತಿರುವಾಗ, ಅಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳಾಗಲಿ, ಸಿಬ್ಬಂದಿ ಗಳಾಗಲಿ ಕರ್ತವ್ಯ ನಿರ್ವಹಿಸಿ ರುವುದು ಕಂಡಿರುವುದು ಕೂಡಾ ವಿರಳ ಎನ್ನುವ ಅಭಿಪ್ರಾಯ ಜನರದ್ದಾಗಿದೆ.

> ಪಟ್ಟಣದಲ್ಲಿ ಮರಗಳು ಬಿದ್ದಾಗ ಪಟ್ಟಣ ಪಂಚಾಯಿತಿಯವರು ಮಾಹಿತಿ ನೀಡಿದಾಗ, ನಮ್ಮ ಸಿಬ್ಬಂದಿಗಳಿಂದ ತೆರವು ಮಾಡಿಸುವೆವು.ಇಂದು ಹೆಚ್ಚಿನ ಮರಗಳು ಉರುಳಿರುವುದರಿಂದ ಬೇರೆಡೆ ತೆರವು ಕಾರ್ಯ ಕೈಗೊಂಡಿದ್ದೆವು, ಕೆಲವು ನಮ್ಮ ಗಮನಕ್ಕೆ ಬಂದಿಲ್ಲ. ಹಾಗಾಗಿ ಪೌರಕಾರ್ಮಿಕರೇ ತೆರವು ಮಾಡಿದ್ದಾರೆ. ಇನ್ನೊಮ್ಮೆ ಮಾಹಿತಿ ಬಂದ ತಕ್ಷಣ ನಾವೆ ತೆರವಿಗೆ ಮುಂದಾಗಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವೆವು.
>
> – ಮಂಜನಾಥ
> ಅರಣ್ಯಾಧಿಕಾರಿ.ಕೊಟ್ಟೂರು.




# ನನ್ನ ಗುರಿ

**ವಿದ್ಯಾರ್ಥಿಗಳಿಗಾಗಿ ಲೇಖನ ಸ್ಪರ್ಧೆ**

**(ಪ್ರೌಢಶಾಲಾ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಗಾಗಿ)**

**ನಿಮ್ಮ ಪ್ರತಿಭೆ ಹೊರಹಾಕಲು ನಿಮಗೊಂದು ಸುವರ್ಣಾವಕಾಶ !**

ಪ್ರಿಯ ವಿದ್ಯಾರ್ಥಿಗಳೆ,

ನಮಗೆ ಪ್ರತಿಯೊಬ್ಬರಿಗೂ ಗುರಿ ಜೊತೆ ಕನಸುಗಳಿರುತ್ತವೆ! ನೀವೂ ಭವಿಷ್ಯದಲ್ಲಿ ಏನಾದರೂ ಆಗಬೇಕೆಂದುಕೊಳ್ಳುತ್ತೀರಿ, ಅಲ್ಲವೆ? ವೈದ್ಯ, ವಿಜ್ಞಾನಿ,ಇಂಜಿನಿಯರ್, ಕ್ರೀಡಾಪಟು, ಕಲಾವಿದ, ಶಿಕ್ಷಕ, ಅಥವಾ ಇತರ ಹೊಸ ಕ್ಷೇತ್ರಗಳಲ್ಲಿ ನಿಮ್ಮ ಹೆಜ್ಜೆ ಗುರುತನ್ನು ಮೂಡಿಸಲು ನೀವು ಬಯಸಬಹುದು. ಈ ಕನಸುಗಳನ್ನು ಬರಹ ರೂಪದಲ್ಲಿ ಹಂಚಿಕೊಳ್ಳಲು ನಿಮಗೆ ಒಂದು ಅವಕಾಶ!

ಹಂಪಿ ಟೈಮ್ಸ್ ಈಗಾಗಲೇ ಸ್ಟುಡೆಂಟ್ ಕಾಲಂ ಮೂಲಕ ಮಕ್ಕಳಲ್ಲಿ ಕತೆ ಬರೆಯುವ ಕೌಶಲ್ಯ ಮೂಡಿಸುತ್ತಿದೆ. ಬೇಸಿಗೆ ರಜೆಯ ನಿಮಿತ್ತ "ನನ್ನ ಗುರಿ" ಶೀರ್ಷಿಕೆಯಡಿ ಲೇಖನ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ!

200 ಪದಗಳಿಗೆ ಮೀರದಂತೆ ಲೇಖನ ಬರೆಯಿರಿ.

ನಿಮ್ಮ ಗುರಿ/ಕನಸು ಏನು? ಅದನ್ನು ಸಾಧಿಸಲು ನೀವು ಏನನ್ನು ಮಾಡಲಿದ್ದೀರಿ? ನಿಮ್ಮ ಆಯ್ಕೆಗೆ ಪ್ರೇರಣೆಯಾರು? ಮತ್ತು ನೀವು ಅಂದುಕೊಂಡ ಗುರಿ ಸಾಧಿಸಲು ನೀವು ತೆಗೆದುಕೊಳ್ಳಬಹುದಾದ ಅವಧಿಯನ್ನೂ ನಮೂದಿಸಿ ನಿಮ್ಮ ಭಾವಚಿತ್ರ, ಸಂಪರ್ಕ ನಂಬರಿನೊಂದಿಗೆ ಬರೆದು ಕಳಿಸಿರಿ.

**ಆಯ್ದ ಲೇಖನಗಳನ್ನು "ಹಂಪಿ ಟೈಮ್ಸ್" ನಲ್ಲಿ ಪ್ರಕಟಿಸಲಾಗುವುದು!**

ನಿಮ್ಮ ಲೇಖನಗಳನ್ನು ನುಡಿ/ಯುನಿಕೋಡ್‌ನಲ್ಲಿ ಟೈಪ್ ಮಾಡಿ, ಇ-ಮೇಲ್: **hampitimes@gmail.com** ಗೆ ಕಳಿಹಿಸಿ.

ನಿಮ್ಮ ಕನಸುಗಳನ್ನು ಹಂಚಿಕೊಳ್ಳಲು ತಯಾರಾಗಿದ್ದೀರಾ? ಬರೆಯಲು ಶುರುಮಾಡಿ!

94486 33038 | www.hampitimes.com / epaper.hampitimes.com | hampitimes@gmail.com



OUR OFFERINGS:
Sales & Distribution – Genuine Toshiba photocopiers and GALTECH Smart panels
Service & Maintenance – Expert technical support and AMC services
Consumables & Accessories – Genuine spare parts
TOSHIBA GALTECH
M:9686663132
SAI MANI ENTERPRISES
Authorized Dealer of Toshiba Photocopiers & GALTECH Sirius interactive flat panel display for Vijayanagara, Bellary and Koppal Districts
# 545/A 6th Ward, Hampi Road, HOSAPETE-583201, Vijayanagara Dist.

# ಆಲಿಕಲ್ಲು ಮಳೆಗೆ 36 ಎಕರೆ ತೋಟಗಾರಿಕೆ ಬೆಳೆ ನಷ್ಟ

## ಕೊಟ್ಟೂರು ತಾಲೂಕಿನಲ್ಲಿ 36 ಮಿ.ಮೀ. ಮಳೆ | ಮನೆಗಳ ಮೇಲ್ಛಾವಣಿ ತಗಡು– ರೇಷ್ಮೆ ಇದ್ದ ಮನೆ ಹಾನಿ



**ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ತಾಲೂಕಿನಲ್ಲಿ ಬುಧವಾರ ರಾತ್ರಿ ದೊಡ್ಡ ಪ್ರಮಾಣದಲ್ಲಿ ಆಲಿಕಲ್ಲು ಮಳೆಗೆ ಕೋಗಳಿ ಗ್ರಾಮದ ಹೊಂಬಾಳೆ ರತ್ನಮ್ಮ ಗಂಡ ಬಸವರಾಜಪ್ಪ ಮನೆ ಮೇಲ್ಛಾವಣಿ ಭಾಗಶಃ ಹಾನಿಗೀಡಾಗಿದ್ದು, ಯಾವುದೇ ಜೀವಕ್ಕೆ ಹಾನಿಯಾಗಿಲ್ಲ ಎಂದು ಗುರುವಾರ ತಹಶೀಲ್ದಾರ್ ಅಂಬರೇಶ ಜಿ.ಕೆ ತಿಳಸಿದರು.

ದೊಡ್ಡ ಪ್ರಮಾಣದಲ್ಲಿ ಗಾಳಿ ಇದ್ದಿದ್ದರಿಂದ ಮನೆ,ಸೆಡ್ ಮೇಲ್ಛಾವಣಿ ತಗಡು ಹಾನಿಗೀಡಾಗಿರುವ ಬಗ್ಗೆ ವರದಿಯಾಗಿವೆ, ಉಳಿದಂತೆ ಹಾನಿಯಾಗಿರುವ ಮನೆಗಳ ಬಗ್ಗೆ ವರದಿ ಪಡೆದುಕೊಂಡು.

ಲೋಕೋಪಯೋಗಿ ಇಲಾಖೆ ಇಂಜನೀಯರ್ ಯಿಂದ ಹಾನಿಗೊಳಗಾದ ಮನೆಗಳನ್ನು ಪರಿಶೀಲಿಸಿ ನಿಖರವಾಗಿ ಎಷ್ಟು ಪ್ರಮಾಣದಲ್ಲಿ ನಷ್ಟವಾಗಿದೆ ಎಂದು ತಿಳಿದು ಪರಿಹಾರ ನೀಡಲಾಗುವುದು ಎಂದರು.

ಮಳೆ ಮಾಪನ ಪ್ರಕಾರ ಕೊಟ್ಟೂರು ತಾಲೂಕಿನಲ್ಲಿ 29.8 ಮೀ.ಮೀ,ಕೋಗಳಿ ಹೋಬಳಿಯಲ್ಲಿ 6.2 ಮೀ.ಮೀ ಒಟ್ಟು ತಾಲೂಕಿನಲ್ಲಿ 36 ಮೀ.ಮೀ ಮಳೆ ದಾಖಲಾಗಿದೆ ಎಂದು ಮಾಹಿತಿ ನೀಡಿದರು.

ಗಾಳಿ ಮಳೆಯಿಂದ ರಾಂಪುರ ಗ್ರಾಮದ ಸರ್ವೆ ನಂಬರ್ 114 ಬಿ.ಬಂದಾತರ ಮರುಸಿದ್ದಪ್ಪ ಇವರ ಜಮೀನಿನಲ್ಲಿ 81:21 ರಲ್ಲಿ ನಿರ್ಮಿಸಿದ ರೇಷ್ಮೆ ಮನೆಯು ಹಾನಿಯಾಗಿರುವುದು.

ನಿನ್ನೆಯ ಮಳೆಗೆ ಹಾನಿಗಳೊಗದ ಬಗ್ಗೆ ತಾಲೂಕಿನ ಸಂಪೂರ್ಣ ಮಾಹಿತಿ ಪಡೆದು ನಷ್ಟದ ಪ್ರಮಾಣ ತಿಳಿದು ಶೀಘ್ರ ಹಣ ಮಂಜೂರು ಮಾಡಲಾಗು ವುದು ಎಂದರು.



> ಬುಧವಾರ ರಾತ್ರಿ ಸುರಿದ ಆಲಿಕಲ್ಲು ಮಳೆಗೆ ತಾಲೂಕಿನ ಗಜಾಪುರ, ಭತ್ತನಹಳ್ಳಿ, ಅಕ್ಕಾಪುರ, ತಿಮ್ಮಲಾಪುರ ಮುಂತಾದ ಗ್ರಾಮಗಳಲ್ಲಿ ಬಿದ್ದ ಆಲಿಕಲ್ಲು ಮಳೆಗೆ ಫಲಕ್ಕೆ ಬಂದಿದ್ದ ಪಪ್ಪಾಯಿ ಬೆಳೆ ಅಧಿಕ ನಷ್ಟವಾಗಿದ್ದು, ಉಳಿದಂತೆ ಮಾವು, ನುಗ್ಗೆ ಸೇರಿ ಸುಮಾರು 36 ಎಕರೆ ಹಾನಿಯಾಗಿದೆ. ಅಂದಾಜು 2.5 ಲಕ್ಷ ರೂ. ಬೆಲೆಯ ತೋಟಗಾರಿಕೆ ಬೆಳೆಗಳು ನಷ್ಟವಾಗಿದೆ.
>
> **–ಡಿ. ಆಶ್ವಿನಿ, ತೋಟಗಾರಿಕೆ ಸಹಾಯಕ ಅಧಿಕಾರಿ. ಕೊಟ್ಟೂರು.**

## ಆನಂದ ಬಾಣ






## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 17–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.55 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 325 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.037 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1578.78 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 162 ಕ್ಯುಸೆಕ್ |
| ಸಾಮರ್ಥ್ಯ | 3.907 ಟಿಎಂಸಿ |

## ಮೈಕ್ರೋ ನ್ಯೂಸ್

### ಲಾರಿ ಮುಷ್ಕರ: ಕೊಪ್ಪಳ ಆರ್.ಟಿ.ಓ ಕಚೇರಿಯಲ್ಲಿ ಕಂಟ್ರೋಲ್ ರೂಂ ಸ್ಥಾಪನೆ

**ಹಂಪಿ ಟೈಮ್ಸ್ ಕೊಪ್ಪಳ**

ಏಪ್ರಿಲ್ 14ರ ಮಧ್ಯರಾತ್ರಿಯಿಂದ ಅನಿರ್ದಿಷ್ಟಾವಧಿ ಕಾಲದ ಲಾರಿ ಮುಷ್ಕರ ನಡೆಯುತ್ತಿರುವ ಹಿನ್ನಲೆಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕೊಪ್ಪಳ ಕಚೇರಿಯಲ್ಲಿ ಕಂಟ್ರೋಲ್ ರೂಂ ಸ್ಥಾಪನೆ ಮಾಡಲಾಗಿದೆ.

ಸಾರ್ವಜನಿಕರಿಗೆ ಸರಕು ಸಾಗಾಣಿಕೆ/ ಅಗತ್ಯ ವಸ್ತುಗಳ ಸರಬರಾಜು ವಿಷಯದಲ್ಲಿ ಏನಾದರೂ ತೊಂದರೆಗಳು ಆದಲ್ಲಿ, ಕೊಪ್ಪಳ ಆರ್.ಟಿ.ಓ ಕಚೇರಿಯಲ್ಲಿ ಸ್ಥಾಪನೆಯಾಗಿರುವ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ: 08539–225023 ಅಥವಾ ಮೊ.ನಂ. 9449864037 ಗೆ ಕರೆ ಮಾಡಿ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹು ಎಂದು ಕೊಪ್ಪಳ ಪ್ರಾದೇಶಿಕ ಸಾರಿಗೆ ಅಧಿಕಾರಿ ಕೆ.ದಾಮೋದರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಹಂಪಿಯಲ್ಲಿ ವಿಶ್ವ ಪರಂಪರೆ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ಹಂಪಿಯ ಉತ್ಖನನ ನೆಲೆ ಮತ್ತು ವೀರಭದ್ರ ದೇವಾಲಯದಲ್ಲಿ ಏ.18ರಂದು ಬೆಳಿಗ್ಗೆ 9:30ಕ್ಕೆ ವಿಶ್ವ ಪರಂಪರೆ ದಿನಾಚರಣೆ ಯಂಗವಾಗಿ ಹಂಪಿಯ ಪರಂಪರೆ ಸಂರಕ್ಷಣೆಯ ಕುರಿತು ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕಮಲಾಪುರ–ಹಂಪಿ, ದಿ ಇನ್ಸಿಟ್ಯೂಷನ್ ಆಫ್ ಇಂಜಿನೀಯರ್ಸ್ (ಇಂಡಿಯಾ), ಮುನಿರಾಬಾದ್ ಕೇಂದ್ರ ಮತ್ತು ಹಂಪಿ ವಿರುಪಾಕ್ಷೇಶ್ವರ ಸ್ವಾಮಿ ಪದವಿ ಮಹಾವಿದ್ಯಾಲಯ ಕಮಲಾಪುರ ಇವರ ಸಹಯೋಗದಲ್ಲಿ ಜರುಗಲಿದೆ.



ಪುರಾತತ್ವ ವಿಭಾಗದ ನಿರ್ದೇಶಕ ಡಾ. ಆರ್. ಶೇಜೇಶ್ವರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಇನ್ಸಿಟ್ಯೂಷನ್ ಆಫ್ ಇಂಜಿನಿಯರ್ಸ್ ಮುನಿರಾಬಾದ್ ಕೇಂದ್ರದ ಅಧ್ಯಕ್ಷ ಡಾ. ಎಸ್. ಎಂ. ಶಶಿಧರ್ ಕಾರ್ಯಕ್ರಮದ ಅಧ್ಯಕ್ಷತೆವಹಿ ಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಂಪಿ ವಿರುಪಾಕ್ಷೇಶ್ವರ ಸ್ವಾಮಿ ಪದವಿ ಮಹಾವಿದ್ಯಾಲ ಯದ ಪ್ರಾಂಶುಪಾಲ ಬಸವರಾಜ ಎಮ್ಮಿಗನೂರ ಹಾಗೂ ಡಾ. ಪಿ. ಶರತ್ ಕುಮಾರ್, ಗೌರವ ಕಾರ್ಯದರ್ಶಿ, ಇನ್ಸಿಟ್ಯೂಷನ್ ಆಫ್ ಇಂಜಿನಿಯರ್ಸ್, ಮುನಿರಾಬಾದ್ ಅವರು ಭಾಗವಹಿಸಲಿದ್ದಾರೆ.

ಪುರಾತತ್ವ ಸಹಾಯಕ ಡಾ. ಆರ್. ಮಂಜನಾಯ್ಕ ಪರಂಪರೆಯ ಸಂರಕ್ಷಣೆಯ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಹಂಪಿಯ ಪಾರಂಪರಿಕ ತಾಣಗಳ ಮಹತ್ವ ವನ್ನೂ, ಅವುಗಳ ಸ್ವಚ್ಛತೆ ಮತ್ತು ಸಂರಕ್ಷಣೆಯ ಅಗತ್ಯ ವನ್ನೂ ಜನತೆಗೆ ಅರಿವು ಮಾಡುವ ಉದ್ದೇಶ ವನ್ನು ಈ ಕಾರ್ಯಕ್ರಮ ಹೊಂದಿದೆ. ಸಾರ್ವ ಜನಿಕರಿಗೆ ಮುಕ್ತ ಪ್ರವೇಶವಿದ್ದು, ಹಂಪಿಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಸಹಕರಿಸುವಂತೆ ಆಯೋಜಕರು ಕೋರಿದ್ದಾರೆ.

# 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

## ಅರ್ಜಿ ಸಲ್ಲಿಸಲು ಮೇ 10 ಕೊನೆದಿನ | ಅಲ್ಪಸಂಖ್ಯಾತರಿಗೆ ಶೇ.75 – ಹಿಂದುಳಿದ ವರ್ಗಕ್ಕೆ ಶೇ.25 ಮೀಸಲು

**ಹಂಪಿ ಟೈಮ್ಸ್ ಹೊಸಪೇಟೆ**

2024–25 ನೇ ಶೈಕ್ಷಣಿಕ ಸಾಲಿನ ಅಲ್ಪಸಂಖ್ಯಾರ ವಿದ್ಯಾರ್ಥಿಗಳಿಗೆ ಮೌಲಾನ ಆಜಾದ್ ಮಾದರಿ ಶಾಲೆಗಳಲ್ಲಿ 6 ನೇ ತರಗತಿಗೆ ಉಚಿತ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ ವಿದ್ಯಾರ್ಥಿಗಳಿಗೆ ಶೇ.75 ರಷ್ಟು, ಎಸ್‌ಸಿ, ಎಸ್ಟಿ ಮತ್ತು ಹಿಂದುಳಿದ ವರ್ಗಗಳಿಗೆ ಶೇ.25 ರಷ್ಟು ಮೀಸಲಾತಿ ಆಧರಿಸಿ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಸೇವಾಸಿಂಧು ಪೋರ್ಟಲ್‌ನ https://sevasindhu.karnataka.gov.in ಮುಖಾಂತರ ಅರ್ಜಿ ಸಲ್ಲಿಸಬಹುದು ಅರ್ಜಿ ಸಲ್ಲಿಸಲು ಮೇ.10 ಕೊನೆಯ ದಿನವಾಗಿರುತ್ತದೆ. ಅರ್ಜಿ ಸಲ್ಲಿಸಲು ಅಗತ್ಯವಿರುವ ದಾಖಲೆಗಳು SATS ಸಂಖ್ಯೆ, ಆಧಾರ್ ಸಂಖ್ಯೆ, ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆ ಹಾಗೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಾಸ್‌ಪೋರ್ಟ್ ಸೈಜ್ ಫೋಟೋ ಮತ್ತು ಅಂಗವಿಕಲರು ಇದ್ದಲ್ಲಿ ಅಂಗವಿಕಲ ಪ್ರಮಾಣ ಪತ್ರ ದಾಖಲೆಗಳನ್ನು ಸಲ್ಲಿಸಬೇಕು. ವಿದ್ಯಾರ್ಥಿ ಗಳು ಉಚಿತ ಸೇವೆಯನ್ನು ಬಳಸಲು ಮೌಲಾನಾ ಆಜಾದ್ ಮಾದರಿ ಶಾಲೆಗಳು ಹಾಗೂ ಹತ್ತಿರದ ಜಿಲ್ಲಾ ಮತ್ತು ತಾಲೂಕು ಅಲ್ಪ ಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ವೆಬ್‌ಸೈಟ್‌ನ್ನು ವೀಕ್ಷಿಸಬಹುದು ಎಂದು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE AUIDIENCE
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94 48 63 30 38
Email:- hampitimes@gmail.com

# ಅನುದಾನ ನೀಡಿ, ವರ್ಷ ಕಳೆದರೂ ಮೇಲೇಳದ ಬಾಲಮಂದಿರ ಕಟ್ಟಡ

## ಮಕ್ಕಳ ಪಾಲನಾ ಸಂಸ್ಥೆಗಳ ಕಟ್ಟಡ ನಿರ್ಮಾಣ ಸ್ಥಳಕ್ಕೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಭೇಟಿ : ಪರಿಶೀಲನೆ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲೂಕಿ ಟಣಕನಕಲ್ಲ ಗ್ರಾಮದಲ್ಲಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 "ಮಿಷನ್ ವಾತ್ಸಲ್ಯ"ದಡಿಯಲ್ಲಿ ಜಿಲ್ಲೆಯಲ್ಲಿ ನಿರ್ಮಾಣ ವಾಗುತ್ತಿರುವ ಮಕ್ಕಳ ಪಾಲನಾ ಕೇಂದ್ರಗಳಾದ "ಸರಕಾರಿ ಬಾಲಕರ ಬಾಲಮಂದಿರ ಮತ್ತು ಬಾಲಕಿಯರ ಬಾಲಮಂದಿರ" ಕಟ್ಟಡ ನಿರ್ಮಾಣ ಸ್ಥಳಕ್ಕೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ. ರಾಮತ್ನಾಳ ಅವರು ಮಂಗಳವಾರ ಭೇಟಿ ನೀಡಿ, ಕಾಮಗಾರಿಯನ್ನು ವೀಕ್ಷಿಸಿದರು.

ಮಕ್ಕಳ ಪಾಲನಾ ಕೇಂದ್ರಗಳಲ್ಲಿ "ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳ, ಆರೈಕೆ ಮತು ರಕ್ಷಣೆ ಕೈಗೊಳ್ಳುತ್ತಿದ್ದು, ಜಿಲ್ಲೆಯಲ್ಲಿ ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಬಹಳಷ್ಟು ಮಕ್ಕಳು ಇದ್ದು, ಈ ಬಾಲಮಂದಿರಗಳು ಜಿಲ್ಲೆಗೆ ಅತ್ಯವಶ್ಯಕವಾಗಿವೆ. ಸದ್ಯ ಬಾಲಮಂದಿರಗಳು ಬಾಡಿಗೆ ಕಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ.



ಇದನ್ನು ಗಮನಿಸಿ ಸರಕಾರವು ಎರಡು ಬಾಲ ಮಂದಿರಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಗೊಳಿಸಿ ಮಂಜುರಾತಿ ಆದೇಶ ನೀಡಿದೆ. ಬಾಲಮಂದಿರಗಳ ನಿರ್ಮಾಣಕ್ಕೆ ಶಿಲಾನ್ಯಾಸವಾಗಿ ವರ್ಷಗಳು ಕಳೆದಿದ್ದು, ಕೇವಲ ಬಾಲಕರ ಬಾಲಮಂದಿರ ಕಟ್ಟಡವು ಬುನಾದಿ ಹಂತದಲ್ಲಿದೆ. ಬಾಲಕಿಯರ ಬಾಲಮಂದಿರವು ನಿರ್ಮಾಣ ಕಾರ್ಯ ಆರಂಭಿಸದಿರುವ ಬಗ್ಗೆ ತೀವ್ರ ಅಸಮಾದಾನವನ್ನು ವ್ಯಕ್ತಪಡಿಸಿದ ಅವರು, ಈ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಶೀಘ್ರವಾಗಿ ಆರಂಭಿಸಿ, ಉತ್ತಮ ಗುಣಮಟ್ಟದ ಕಟ್ಟಡವನ್ನು ನಿರ್ಮಾಣ ಮಾಡುವಂತೆ ಕೊಪ್ಪಳ ನಿರ್ಮಿತಿ ಕೇಂದ್ರದ ಸಹಾಯಕ ಅಭಿಯಂತರರಿಗೆ ಸೂಚಿಸಿದರು. ತಪ್ಪಿದಲ್ಲಿ ನಿರ್ಮಾಣ ಕಾಮಗಾರಿಯ ಗುತ್ತಿಗೆಯನ್ನು ರದ್ದುಪಡಿಸಿ, ಬೇರೆ ಸಂಸ್ಥೆಗೆ ನೀಡುವಂತೆ ಕೊಪ್ಪಳ ಜಿಲ್ಲಾಧಿಕಾರಿಗಳಿಗೆ ವರದಿ ನೀಡುವುದಾಗಿ ಎಚ್ಚರಿಸಿದರು.

ಈ ಕಟ್ಟಡ ನಿರ್ಮಾಣ ಕಾಮಗಾರಿಗೆ ಮತ್ತು ಮುಂದಿನ ದಿನಗಳಲ್ಲಿ ಮಕ್ಕಳಿಗೆ ಅವಶ್ಯಕವಾಗ ಬಹುದಾದ ನೀರಿನ ಸೌಲಭ್ಯವನ್ನು ಒದಗಿಸುವಂತೆ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು. ಕಟ್ಟಡ ನಿರ್ಮಾಣ ಕಾಮಗಾರಿಗೆ ಜಿಲ್ಲಾಧಿಕಾರಿಗಳು ನೀಡಿರುವ ಭೂಮಿಯು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಹೆಸರಿನಲ್ಲಿದ್ದು, ಕೇಂದ್ರ ಕಛೇರಿಯ ಸುತ್ತೋಲೆಯಂತೆ ಈ ಜಮೀನನ್ನು ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರುರವರ ಹೆಸರಿನಲ್ಲಿ ವರ್ಗಾಯಿಸುವಂತೆ ತಹಶೀಲ್ದಾರರಿಗೆ ತಿಳಿಸಿದರು.

ಕೊಪ್ಪಳ ತಹಶೀಲ್ದಾರ ವಿಠ್ಠಲ ಚೌಗಲಾ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ, ಓಜನಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಹುಚ್ಚಪ್ಪ ಭೋವಿ, ಇತರರು ಉಪಸ್ಥಿತರಿದ್ದರು.